ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಬ್ರಿಕ್ಸ್ ರಚನೆಯಾಗಿ ಎರಡು ದಶಕ ಪೂರೈಸಿದ ಹಿನ್ನಲೆಯಲ್ಲಿ ಭಾರತೀಯ ಅಂಚೆ ಇಲಾಖೆಯು ಎರಡು ಸ್ಮರಣಾರ್ಥ ಅಂಚೆ ಚೀಟಿಗಳನ್ನು ಶನಿವಾರ ಬಿಡುಗಡೆ ಮಾಡಿದೆ.

13 ಸೆಪ್ಟೆಂಬರ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -182 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಹಬ್ಬ ಮುಗಿದ ಮೇಲೆ ದೇಹಕ್ಕೆ ರಜೆ ಏಕೆ? » 2


ಬರಪೀಡಿತ ಘೋಷಣೆಗಾಗಿ ಸೆ.17ರಂದು ಬೇಲೂರು ಬಂದ್ » 3


ಸರ್ಕಾರಿ ಗೌರವದೊಂದಿಗೆ ಯೋಧ ಮಧು ಅಂತ್ಯ ಕ್ರಿಯೆ » 4

# ದೆಹಲಿಯಲ್ಲಿ ವಿಶ್ವನಾಯಕರ ಸಮಾಗಮ

## ಕಿಂಗ್ಡಮ್ ಬಿಜಿಎಂ ಎಂದ ಪ್ರಧಾನಿ ಮೋದಿ | ಮಹತ್ವದ ವಿಚಾರಗಳ ಚರ್ಚೆ

• ಪ್ರಜೋದಯ ವರದಿ

**ನವದೆಹಲಿ:** ವಿಶ್ವದ 11 ರಾಷ್ಟ್ರಗಳ ನಾಯಕರು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಒಟ್ಟಾಗಿದ್ದು, ಎರಡು ದಿನಗಳ ಬ್ರಿಕ್ಸ್ ಶೃಂಗಸಭೆಗೆ ಶನಿವಾರ ಚಾಲನೆ ನೀಡಲಾಯಿತು.

ಭಾರತ ಮಂಟಪದಲ್ಲಿ ನಡೆಯುತ್ತಿರುವ ಸಭೆಯಲ್ಲಿ ಜಾಗತಿಕ ನಾಯಕರು ಒಟ್ಟಿಗೆ ಇರುವ ಚಿತ್ರವನ್ನು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಕಿಂಗ್ಡಮ್ ಬಿಜಿಎಂ ಎಂದು ಬಣ್ಣಿಸಿದ್ದಾರೆ. ಮೋದಿ, ಪುಟಿನ್, ಜಿನ್ ಪಿಂಗ್ ಅವರ ಈ ನಡೆ ಒಗ್ಗಟ್ಟು ಪ್ರದರ್ಶನವಾಗಿದೆ. ಏಳು ವರ್ಷದ ಬಳಿಕ ಚೀನಾ ಅಧ್ಯಕ್ಷ ಭಾರತಕ್ಕೆ ಭೇಟಿ ನೀಡಿದ್ದಾರೆ. ಇದು 18ನೇ ಬ್ರಿಕ್ಸ್ ಸಮ್ಮೇಳನದ ಪ್ರಮುಖ ಘಟನೆ ಎಂದು ರಾಜತಾಂತ್ರಿಕ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿ, ಜಾಗತಿಕ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯವಿದೆ. ಸಂಘಟನೆಯಲ್ಲಿ ಇರುವ ಏಕತೆ ಮತ್ತು ಒಮ್ಮತವನ್ನು ಜಾಗತಿಕ ವೇದಿಕೆಯಲ್ಲಿ ಸ್ಪಷ್ಟ ಫಲಿತಾಂಶಗಳಾಗಿ ಪರಿವರ್ತಿಸುವ ಸಮಯ ಬಂದಿದೆ ಎಂದರು.

ಮುಂದಿನ 20 ವರ್ಷಗಳಿಗಾಗಿ ಬ್ರಿಕ್ಸ್ ಮಹತ್ವಾಕಾಂಕ್ಷೆಯ ಕಾರ್ಯಸೂಚಿ ರೂಪಿಸಬೇಕು. ಅದಕ್ಕೆ ಸಂಘಟನೆಯ ಕಾರ್ಯವಿಧಾನದಲ್ಲೇ ಸುಧಾರಣೆ ಆರಂಭವಾಗಬೇಕು. ಪ್ರತಿ ವರ್ಷ ಬ್ರಿಕ್ಸ್ ಅಧ್ಯಕ್ಷತೆ ಬದಲಾಗುತ್ತಿದ್ದರೂ ಅದರಿಂದ ಸಂಘಟನೆಯ ಸಾಂಸ್ಥಿಕ ಪ್ರಗತಿಗೆ ಅಡ್ಡಿಯಾಗಬಾರದು. ಅಧ್ಯಕ್ಷತೆ ಬದಲಾದರೂ ನಿರ್ಧಾರಗಳು ಮತ್ತು ಯೋಜನೆಗಳಲ್ಲಿ ನಿರಂತರತೆ ಉಳಿಯುವಂತಹ ಬಲಿಷ್ಟ ವ್ಯವಸ್ಥೆ ಅಗತ್ಯವೆಂದರು.

ಪ್ರಸ್ತುತ ಜಾಗತಿಕ ಆಡಳಿತ ವ್ಯವಸ್ಥೆ ಪಿರಮಿಡ್‌ನಂತಿದ್ದು, ಅಧಿಕಾರ ಮತ್ತು ನಿರ್ಧಾರ ಕೈಗೊಳ್ಳುವ ಶಕ್ತಿ ಕೆಲವೇ ದೇಶಗಳು ಹಾಗು ಸಂಸ್ಥೆಗಳ ಬಳಿ ಕೇಂದ್ರೀಕೃತವಾಗಿದೆ. ಈ ನಿರ್ಧಾರಗಳಿಂದ ನೇರವಾಗಿ ಪರಿಣಾಮಕ್ಕೊಳಗಾಗುವ ಹಲವು ದೇಶಗಳಿಗೆ ನಿರ್ಧಾರ ಪ್ರಕ್ರಿಯೆಯಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗುತ್ತಿಲ್ಲ. ಎಲ್ಲಾ ದೇಶಗಳ ಧ್ವನಿಗೂ ಸೂಕ್ತ ಪ್ರಾತಿನಿಧ್ಯ ದೊರೆಯುವಂತಹ ಜಾಗತಿಕ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಬ್ರಿಕ್ಸ್ ಕೆಲಸ ಮಾಡಬೇಕೆಂದು ಪ್ರಧಾನಿ ಹೇಳಿದರು.

ಜಾಗತಿಕ ಆಡಳಿತ ಸುಧಾರಣೆಗಾಗಿ ಮುಂದಿನ ಶೃಂಗಸಭೆಯೊಳಗೆ 10 ಪ್ರಸ್ತಾವನೆಗಳನ್ನು ಸಿದ್ಧಪಡಿಸಿ, ಅವುಗಳನ್ನು ಬ್ರಿಕ್ಸ್ ಸುಧಾರಣಾ » ನಾಲ್ಕನೇ ಪುಟದಲ್ಲಿ



### ಪಹಲ್ಗಾಮ್ ಉಗ್ರರ ದಾಳಿಗೆ ಖಂಡನೆ

2025ರ ಏ.22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಅಮಾಯ ಕರನ್ನು ಬಲಿ ತೆಗೆದುಕೊಂಡ ಭೀಕರ ಭಯೋತ್ಪಾದನಾ ದಾಳಿಯನ್ನು ಬ್ರಿಕ್ಸ್ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ. ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ ಇರಬೇಕು ಹಾಗು ಗಡಿಪಾರಿನ ಭಯೋತ್ಪಾದನೆ, ಉಗ್ರರಿಗೆ ಧನಸಹಾಯ ಮತ್ತು ಅವರಿಗೆ ಆಶ್ರಯ ತಾಣ ನೀಡುವುದನ್ನು ತಕ್ಷಣ ತಡೆಯಬೇಕೆಂದು ಪಾಕಿಸ್ತಾನಕ್ಕೆ ಪರೋಕ್ಷ ಎಚ್ಚರಿಕೆ ನೀಡಲಾಗಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ಮತ್ತು ಬ್ರೆಜಿಲ್ ದೇಶಗಳಿಗೆ ಖಾಯಂ ಸದಸ್ಯತ್ವ ನೀಡುವ ಆಕಾಂಕ್ಷೆಗೆ ರಷ್ಯಾ ಮತ್ತು ಚೀನಾ ತಮ್ಮ ಬೆಂಬಲವನ್ನು ಪುನರುಚ್ಚರಿಸಿವೆ. ಅಷ್ಟೇ ಅಲ್ಲದೆ, ಆಫ್ರಿಕನ್ ದೇಶಗಳಿಗೆ ಮಂಡಳಿಯಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಲಾಗಿದೆ.

# ಸಿದ್ದರಾಮಯ್ಯ ಮತ್ತೆ ಚುನಾವಣೆಗೆ ಸ್ಪರ್ಧಿಸಲಿ

## ರಾಜ್ಯಸಭೆ, ಲೋಕಸಭೆಯಲ್ಲೂ ಅವರ ಸೇವೆ ಅಗತ್ಯ : ಸಚಿವ ಶಿವಲಿಂಗೇಗೌಡ ಆಶಯ

• ಪ್ರಜೋದಯ ವರದಿ

**ಅರಸೀಕೆರೆ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯ ನಿವೃತ್ತಿ ಪಡೆಯುವ ನಿರ್ಧಾರ ಮಾಡಿಲ್ಲ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಬೇಕೋ, ಬೇಡವೋ ಎಂಬ ಕುರಿತು ಆಲೋಚನೆ ನಡೆಸುತ್ತಿದ್ದಾರೆ. ಅವರು ಚುನಾವಣೆಯಲ್ಲಿಸ್ಪರ್ಧಿಸಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಇನ್ನೂ ಹಲವು ವರ್ಷಗಳ ಕಾಲ ಸಕ್ರಿಯ ರಾಜಕೀಯದಲ್ಲಿ ಮುಂದುವರಿಯಬೇಕು. ಕೇವಲ ರಾಜ್ಯ ರಾಜಕಾರಣಕ್ಕೆ ಸೀಮಿತವಾಗದೆ ರಾಷ್ಟ್ರ ರಾಜಕಾರಣದ ಲ್ಲಿಯೂ ಅವರ ಸೇವೆ ಅಗತ್ಯವಾಗಿದೆ. ರಾಜ್ಯಸಭೆ ಅಥವಾ ಲೋಕಸಭೆಯ ಲ್ಲಿಯೂ ಅವರ ಉಪಸ್ಥಿತಿ ಇರ ಬೇಕೆಂದರು.



ಸಿದ್ದರಾಮಯ್ಯ ಅವರ ಇತ್ತೀಚಿನ ಹೇಳಿಕೆ ಹಿನ್ನಲೆ ಕೆಲ ಕಾಂಗ್ರೆಸ್ ನಾಯಕರು ಪಕ್ಷ ತೊರೆಯಲು ಸಿದ್ಧರಾಗಿದ್ದಾರೆ ಎಂಬ ವದಂತಿ ಹರಿದಾಡುತ್ತಿವೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅದೆಲ್ಲವೂ ಸುಳ್ಳು. ಯಾರೂ ಕಾಂಗ್ರೆಸ್ ತೊರೆಯುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಭಿನ್ನಾಭಿಪ್ರಾಯಗಳು ಇರುವುದು ಸಹಜ. ಪಕ್ಷದೊಳಗೆ ಸಣ್ಣ ಪುಟ್ಟ ಗೊಂದಲ ಗಳಿದ್ದರೆ ಅವುಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲಾಗುವುದು. ಅದರಿಂದ ಪಕ್ಷಕ್ಕೆ ಧಕ್ಕೆಯಾಗುವುದಿಲ್ಲ ಎಂದರು.

**ಬಿಜೆಪಿ ಪಾದಯಾತ್ರೆ ರಾಜಕೀಯ ಪ್ರೇರಿತ:** ಬಿಜೆಪಿ ನಡೆಸಿದ ಬಳ್ಳಾರಿ ಪಾದಯಾತ್ರೆ, ರಾಜಕೀಯ ಪ್ರೇರಿತವಾಗಿದೆ ಎಂದುಟೀಕಿಸಿದ ಸಚಿವರು, ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಾಯಕರು ವಿಧಾನ ಸಭೆಯ ಕಲಾಪವನ್ನುಅಡ್ಡಿಪಡಿಸಿದ್ದರು. ಅವರು ರಾಜೀನಾಮೆ ನೀಡಿದ ಬಳಿಕವೂ ಮತ್ತೆ ಪಾದಯಾತ್ರೆ ನಡೆಸುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದರು.

ನಾಗೇಂದ್ರ ಆರೋಪ ಎದುರಿಸುತ್ತಿರುವ ವ್ಯಕ್ತಿಯಷ್ಟೇ ಹೊರತು ಅಪರಾಧ ಸಾಬೀತಾಗಿಲ್ಲ. ಆದರೂ ನೈತಿಕ ಹೊಣೆ ಹೊತ್ತು ಅವರು ರಾಜೀನಾಮೆ ನೀಡಿದ್ದಾರೆ. ಇಂತಹ ಆರೋಪಗಳನ್ನು ಎದುರಿಸುತ್ತಿರುವವರು ದೇಶದಲ್ಲಿ ಇನ್ನೂ ಹಲವರಿದ್ದಾರೆ. ಹಣ ವರ್ಗಾವಣೆ ಪ್ರಕರಣದಲ್ಲಿ 84 ಕೋಟಿ ರೂ. ಹಸ್ತಾಂತರವಾಗಿದ್ದು, ಅದರಲ್ಲಿ 79 ಕೋಟಿ ರೂ. ವಾಪಸ್ ಬಂದಿದೆ. ಹಣ ವರ್ಗಾವಣೆಯಲ್ಲಿ ನಾಗೇಂದ್ರ ಅವರ ಪಾತ್ರವಿಲ್ಲ ಎಂದು ತನಿಖಾ ಸಂಸ್ಥೆಯೇ ಹೇಳಿದೆ ಎಂದು ಸಚಿವರು ತಿಳಿಸಿದರು.

### 2029ಕ್ಕೆ ರಾಹುಲ್ ಗಾಂಧಿ ಪ್ರಧಾನಿ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸುಭದ್ರ ಆಡಳಿತ ನೀಡುತ್ತಿದೆ. ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತಿದೆ. ದೇಶದಲ್ಲಿಯೂ ಕಾಂಗ್ರೆಸ್ ಪಕ್ಷ ಬಲಿಷ್ಠವಾಗುತ್ತಿದ್ದು, 2029ರ ಲೋಕಸಭಾ ಚುನಾವಣೆಯ ಬಳಿಕ ರಾಹುಲ್ ಗಾಂಧಿ ದೇಶದ ಪ್ರಧಾನಿಯಾಗಲಿದ್ದಾರೆ. ದೇಶದ ಜನರು ಕಳೆದ ಮೂರು ಅವಧಿಯ ಬಿಜೆಪಿ ಆಡಳಿತವನ್ನು ನೋಡಿದ್ದಾರೆ. ಯುವಜನತೆ ರಾಹುಲ್ ಗಾಂಧಿ ಅವರತ್ತ ಒಲವು ಹೊಂದಿದೆ. ಯುವಶಕ್ತಿಯ ಬೆಂಬಲದೊಂದಿಗೆ ನಮ್ಮ ಯುವ ನಾಯಕರು ದೇಶದ ಪ್ರಧಾನಿಯಾಗುವುದು ನಿಶ್ಚಿತ ಎಂದು ಹೇಳಿದರು.

### ಸರ್ಕಾರದ ಸಾಧನೆ ಬಗ್ಗೆ ಅಂಕಿ-ಅಂಶ

ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡುತ್ತಿದ್ದು, ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಸರ್ಕಾರದ ಕಾರ್ಯವೈಖರಿಯನ್ನು ಸಹಿಸಲಾಗದೆ ಇಕ್ಕಟ್ಟಿಗೆ ಸಿಲುಕಿಸುವ ಉದ್ದೇಶದಿಂದ ವಿರೋಧ ಪಕ್ಷಗಳು ರಾಜಕೀಯವಾಗಿ ಆರೋಪ ಮಾಡುತ್ತಿವೆ. ನಮ್ಮ ಸರ್ಕಾರ ಯಾವುದೇ ಸಾಧನೆ ಮಾಡಿಲ್ಲವೆಂದು ಆರೋಪಿಸುವವರು ಅಂಕಿ-ಅಂಶಗಳೊಂದಿಗೆ ಮಾತ ನಾಡಲಿ. ಸರ್ಕಾರದ ಸಾಧನೆಗಳ ಕುರಿತು ಅಗತ್ಯ ದಾಖಲೆ ಹಾಗೂ ಅಂಕಿ-ಅಂಶಗಳನ್ನು ನೀಡಲು ನಾವು ಸಿದ್ಧರಿದ್ದೇವೆಂದು ಸವಾಲು ಹಾಕಿದರು.

ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ವಿಚಾರದಲ್ಲಿ ಹುದ್ದೆ ಖಾಲಿ ಇದೆ. ಶೀಘ್ರದಲ್ಲೇ ಆ ಸ್ಥಾನ ಭರ್ತಿ ಮಾಡುವ ನಿರ್ಧಾರ ಕೈಗೊಳ್ಳಲಾಗುವುದೆಂದು ಸಚಿವರು ಹೇಳಿದರು.




## ಜನರ ಅಹವಾಲು ಆಲಿಸಿದ ಶಾಸಕ ಸ್ವರೂಪ್

# ಸಾಲಗಾಮೆಯಲ್ಲಿ ಪ್ರಜಾ ಸೇವಾ ಆಂದೋಲನ



• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಅವರ ಬಳಿಗೆ ಆಡಳಿತ ವ್ಯವಸ್ಥೆಯೇ ತೆರಳಿ ಕುಂದುಕೊರತೆಗಳನ್ನು ಆಲಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಪ್ರಜಾ ಸೇವಾ ಆಂದೋಲನ ಶಾಸಕ ಹೆಚ್.ಪಿ.ಸ್ವರೂಪ್ ಅವರ ಅಧ್ಯಕ್ಷತೆಯಲ್ಲಿ ಸಾಲಗಾಮೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಶನಿವಾರ ನಡೆಯಿತು.

ಸಭೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಭೂಮಿ ಸಮಸ್ಯೆ, ಪಹಣಿ ತಿದ್ದುಪಡಿ, ಪೋಡಿ, ಖಾತೆ ಬದಲಾವಣೆ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ವಸತಿ ಯೋಜನೆ, ಪಿಂಚಣಿ ಹಾಗೂ ಹೊಸ ಪಡಿತರ ಚೀಟಿ ವಿತರಣೆ ಸೇರಿ ವಿವಿಧ ಸರ್ಕಾರಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅರ್ಜಿಗಳು ಸಲ್ಲಿಕೆಯಾದವು.

ಅದರೊಂದಿಗೆ ಗ್ರಾಮಗಳ ಮೂಲ ಸೌಕರ್ಯಗಳ ಕುರಿತಾಗಿಯೂ ಹಲವು ದೂರುಗಳು ಕೇಳಿಬಂದವು. ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಸಮರ್ಪಕ » ನಾಲ್ಕನೇ ಪುಟದಲ್ಲಿ

# ಬರ ಎದುರಿಸಿ ಸುಭದ್ರ ಆಡಳಿತ ನೀಡಲು ಬದ್ಧ

## ಜನರ ಆಶೋತ್ತರಗಳಿಗೆ ಸ್ಪಂದಿಸುವುದೇ ಸರ್ಕಾರದ ಉದ್ದೇಶ | ಸಚಿವ ಕೆ.ಎಂ.ಶಿವಲಿಂಗೇಗೌಡ ಭರವಸೆ

• ಪ್ರಜೋದಯ ವರದಿ

**ಅರಸೀಕೆರೆ:** ಬರ ಸೇರಿ ಯಾವುದೇ ಪರಿಸ್ಥಿತಿ ಎದುರಾದರೂ ಜನರ ಸಂಕಷ್ಟಕ್ಕೆ ಸ್ಪಂದಿಸಿ, ಸುಭದ್ರ ಆಡಳಿತ ನೀಡಲು ಸರ್ಕಾರ ಬದ್ಧವಾಗಿದೆ. ಜನರ ಆಶೋತ್ತರಗಳಿಗೆ ಸ್ಪಂದಿಸುವುದೇ ಸರ್ಕಾರದ ಪ್ರಮುಖ ಉದ್ದೇಶ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದ ವರವಲಯದಲ್ಲಿರುವ ಎಪಿಎಂಸಿ ಆವರಣದಲ್ಲಿ ಶನಿವಾರ ನಡೆದ ಪ್ರಜಾಸೇವಾ ಆಂದೋಲನ ಸಭೆ ಹಾಗು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಾವು ಯಾರ ನಿಂದನೆಗೂ ಹೆದರುವ ಅಗತ್ಯವಿಲ್ಲ. ಟೀಕೆ ಮಾಡುವವರಿಗೂ ದೇವರು ಒಳ್ಳೆಯದು ಮಾಡಲಿ. ಯಾರನ್ನೂ ನಿಂದಿಸದೆ ಎಲ್ಲರೂ ಒಟ್ಟಾಗಿ ಜಿಲ್ಲೆಯನ್ನು ಅಭಿವೃದ್ಧಿ ಪಡಿಸೋಣವೆಂದು ಹೇಳಿದರು.

ಜನರ ಬಳಿಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳೇ ತೆರಳಿ ಅವರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಜಾಸೇವಾ ಆಂದೋಲನಕ್ಕೆ ರೂಪ ನೀಡಿದ್ದಾರೆ. ಜನರು ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ಅವರ ಮನೆ ಬಾಗಿಲಿಗೆ ಆಡಳಿತವನ್ನು ಕೊಂಡೊಯ್ಯುವುದು ಉದ್ದೇಶವಾಗಿದೆ ಎಂದರು.

**ಜನರಿಗೆ ತೊಂದರೆ ಕೊಡಬೇಡಿ**

ಅರಸೀಕೆರೆಯ ಜನರು ಮುಗ್ಧರು ಹಾಗು ಸಹೃದಯಿಗಳು. ಇಂತಹ ಒಳ್ಳೆಯ ಜನರು ಎಲ್ಲಿಯೂ ಸಿಗುವುದಿಲ್ಲ. » ನಾಲ್ಕನೇ ಪುಟದಲ್ಲಿ



### ಯಾರೂ ಆತಂಕಪಡುವ ಅಗತ್ಯವಿಲ್ಲ

ಜಿಲ್ಲೆ ಸೇರಿ ರಾಜ್ಯದ ಹಲವು ಭಾಗಗಳಲ್ಲಿ ಬರದ ಪರಿಸ್ಥಿತಿ ಎದುರಾಗಿದೆ. ಇಂತಹ ಸಂಕಷ್ಟಗಳು ಹಿಂದೆ ಕೂಡ ಬಂದಿದ್ದು, ಅವುಗಳನ್ನು ಜನರು ಧೈರ್ಯದಿಂದ ಎದುರಿಸಿದ್ದಾರೆ. ಈಗಲೂ ಕಠಿಣ ಪರಿಸ್ಥಿತಿ ಎದುರಾದರೂ ಜನರ ರಕ್ಷಣೆಗೆ ಸರ್ಕಾರ ನಿಲ್ಲಲಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಸಚಿವರು ಭರವಸೆ ನೀಡಿದರು.

# ಟ್ಯಾಂಕರ್ ಪಲ್ಟಿ: ಅಪಾರ ಪ್ರಮಾಣದ ಎಥೆನಾಲ್ ಸೋರಿಕೆ

• ಪ್ರಜೋದಯ ವರದಿ

**ಹಾಸನ:** ಚಾಲಕನ ನಿಯಂತ್ರಣ ತಪ್ಪಿ ಟ್ಯಾಂಕರ್ ಪಲ್ಟಿಯಾಗಿ ಅಪಾರ ಪ್ರಮಾಣದ ಎಥೆನಾಲ್ ರಸ್ತೆ ಮೇಲೆ ಬಿದ್ದ ಘಟನೆ ರಾಷ್ಟ್ರೀಯ ಹೆದ್ದಾರಿ -75ರ ಕೆಂಚಟ್ಟಹಳ್ಳಿ ಮೇಲ್ಸೇತುವೆ ಮೇಲೆ ಶನಿವಾರ ನಡೆದಿದೆ.

ತಮಿಳುನಾಡಿನಿಂದ ಹಾಸನಕ್ಕೆ ಬರುತ್ತಿದ್ದ ಎಥೆನಾಲ್ ತುಂಬಿದ್ದ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಉರುಳಿ ಬಿದ್ದಿದೆ. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಹಾಗು ಅಗ್ನಿಶಾಮಕ ದಳದ ಸಿಬ್ಬಂದಿ ದೌಡಾಯಿಸಿ ಸೋರಿಕೆಯಾಗುತ್ತಿದ್ದ ಎಥೆನಾಲ್ ನಿಯಂತ್ರಿಸಿ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡರು.

ರಸ್ತೆ ಮೇಲೆಲ್ಲ ಎಥೆನಾಲ್ ಸುರಿದಿದ್ದರಿಂದ ಮೇಲ್ಸೇತುವೆ ಮೇಲೆ ವಾಹನಗಳ ಸಂಚಾರವನ್ನು ಬಂದ್ ಮಾಡಿ, ಬೆಂಕಿ ಹೊತ್ತಿಕೊಳ್ಳುವ ಆತಂಕದಿಂದ ಸಾರ್ವಜನಿಕರು ಹಾಗು ವಾಹನ ಸವಾರರು ಸ್ಥಳದಿಂದ ದೂರ ಇರುವಂತೆ ಸೂಚಿಸಿ, ಲಾರಿಯನ್ನು ಮೇಲೆತ್ತುವ ಕಾರ್ಯಾಚರಣೆ ನಡೆಸಲಾಯಿತು.



ಗೌರಿ-ಗಣೇಶ ಹಬ್ಬ ಹಾಗು ವಾರಾಂತ್ಯದ ಹಿನ್ನಲೆ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿತ್ತು. ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಸವಾರರು ಪರದಾಡಿದರು. ವಾಹನ ದಟ್ಟಣೆ ನಿಯಂತ್ರಿಸಲು ಸಂಚಾರಿ ಪೊಲೀಸರು ಹರಸಾಹಸ ಪಡುವಂತಾಯಿತು.

# ನಗರದಲ್ಲಿ ಬಸ್ ಡಿಕ್ಕಿ: ಗೃಹಿಣಿ ಸಾವು

• ಪ್ರಜೋದಯ ವರದಿ



**ಹಾಸನ:** ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಗೃಹಿಣಿ ಮೃತಪಟ್ಟಿರುವ ಘಟನೆ ನಗರದ ಎನ್.ಆರ್.ವೃತ್ತದಲ್ಲಿ ಶನಿವಾರ ನಡೆದಿದೆ.

ತಾಲ್ಲೂಕಿನ ದೊಡ್ಡಆಲದ ಹಳ್ಳಿ ಗ್ರಾಮದ ಡಿ.ಜೆ.ಅಪರ್ಣ (31) ಮೃತರು. ಬೆಂಗಳೂರಿನಲ್ಲಿ ವಾಸವಿದ್ದ ಅಪರ್ಣ ಅವರು ಗೌರಿ ಹಬ್ಬದ ಹಿನ್ನಲೆಯಲ್ಲಿ ಎರಡು ದಿನಗಳ ಹಿಂದಷ್ಟೇ ಊರಿಗೆ ಬಂದಿದ್ದರು. ಶನಿವಾರ ಸ್ನೇಹಿತೆ ರಕ್ಷಿತಾ ಅವರೊಂದಿಗೆ ಆಸ್ಪತ್ರೆಗೆ ಬಂದಿದ್ದರು. ಚಿಕಿತ್ಸೆ ಬಳಿಕ ಹಬ್ಬದ ಸಾಮಾಗ್ರಿ ಖರೀದಿಸಿ ಸ್ಕೂಟಿಯಲ್ಲಿ ಊರಿಗೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾ ಗಿದೆ. ಬಸ್ ಚಕ್ರಕ್ಕೆ ಸಿಲುಕಿದ ಅಪರ್ಣ ಅವರು ರಸ್ತೆ ಮೇಲೆ ಬಿದ್ದಿದ್ದರು. ಆಟೋ ಚಾಲಕ ಕುಮಾರ್ ಅವರು ತಕ್ಷಣವೇ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಆಸ್ಪತ್ರೆಯಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಅಪಘಾತ ಸಂಭವಿಸುತ್ತಿದ್ದಂತೆ ಜನರು ಮುಗಿಬಿದ್ದಿದ್ದು, ಮೃತರ ಕೊರಳಲ್ಲಿದ್ದ ಎರಡು ಎಳೆ ಚಿನ್ನದ ಮಾಂಗಲ್ಯ ಸರ ಕಳುವಾಗಿದೆ ಎನ್ನಲಾಗಿದೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೇಲೂರು ತಾಲ್ಲೂಕಿನ ಹಲವು ಕೆರೆಗಳು ಭರ್ತಿ | ಬರದ ನಡುವೆ ರೈತರಿಗೆ ವರದಾನ

# ಎತ್ತಿನಹೊಳೆ ಯೋಜನೆ ಹಳೇಬೀಡಿನ ಕೆರೆಗಳಿಗೆ ಸಂಜೀವಿನಿ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಬರದ ಬೇಗೆಯಿಂದ ಬತ್ತಿದ್ದ ಕೆರೆ- ಕಟ್ಟೆಗಳು, ನೀರಿಗಾಗಿ ಹಾಹಾಕಾರ ಪಡುತ್ತಿದ್ದ ರೈತರು, ಕುಸಿದ ಅಂತರ್ಜಲ ಮಟ್ಟ ಇಂತಹ ಸಂಕಷ್ಟದ ನಡುವೆಯೇ ಎತ್ತಿನಹೊಳೆ ಯೋಜನೆಯ ನೀರು ಬೇಲೂರು ತಾಲ್ಲೂಕಿನ ಹಳೇಬೀಡು ಭಾಗದ ಕೆರೆಗಳಿಗೆ ವರದಾನವಾಗಿ ಪರಿಣಮಿಸಿದೆ.

ಯೋಜನೆಯ ಮೂಲ ಉದ್ದೇಶದಡಿ ಬೇಲೂರು ತಾಲ್ಲೂಕು ಭಾಗದ ಕೆರೆಗಳಿಗೆ ನೀರು ಹರಿಸುವ ವ್ಯವಸ್ಥೆ ಇಲ್ಲದಿದ್ದರೂ, ಕಾಮಗಾರಿಗೆ ಬೇಲೂರು ತಾಲ್ಲೂಕಿನ ಐದಳ್ಳಕಾವಲು ಬಳಿ ಅಡ್ಡಿಯುಂಟಾಗಿರುವುದರಿಂದ ಅರಸೀಕೆರೆ ತಾಲ್ಲೂಕು ತಲುಪಿ, ಅಲ್ಲಿಂದ ಬಯಲು ಸೀಮೆಗೆ ಹರಿಯಬೇಕಾದ ನೀರನ್ನು ಬೇಲೂರು- ಹಳೇಬೀಡು ಮೂಲಕ ವಾಣಿವಿಲಾಸ ಸಾಗರಕ್ಕೆ ಹರಿಸಲಾಗುತ್ತಿದೆ. ಅದರಿಂದ ಬೇಲೂರು ತಾಲ್ಲೂಕು ಭಾಗದ ಹತ್ತಾರು ಕೆರೆಗಳು ತುಂಬಿರುವುದರಿಂದ ಈ ಭಾಗದ ರೈತರ ಬದುಕಿಗೆ ಸಂಜೀವಿನಿಯಾಗಿದೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆ ಕಾಮಗಾರಿ ಆರಂಭಗೊಂಡು ಒಂದು ದಶಕ ಕಳೆದರೂ ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಂಡಿಲ್ಲ. » ನಾಲ್ಕನೇ ಪುಟದಲ್ಲಿ



### ಅಂತರ್ಜಲಕ್ಕೂ ಮರುಜೀವ

ಕೆರೆಗಳು ತುಂಬಿರುವ ಪರಿಣಾಮ ಅಂತರ್ಜಲ ಮಟ್ಟದಲ್ಲಿಯೂ ಸುಧಾರಣೆ ಕಂಡು ಬರುತ್ತಿದೆ. ಹಲವು ಪ್ರದೇಶಗಳಲ್ಲಿ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಮಲ್ಲಾಪುರ, ರಾಜನಸಿರಿಯೂರು, ಮಾಯಗೋಡನಹಳ್ಳಿ, ಚಟಚಟಹಳ್ಳಿ ಹಾಗು ಜಾವಗಲ್ ಸುತ್ತಮುತ್ತಲಿನ ರೈತರಿಗೂ ಕೆರೆ ತುಂಬಿರುವುದರಿಂದ ಅನುಕೂಲವಾಗಿದೆ. ಬೇಸಿಗೆಯಲ್ಲಿ ನೀರಿಗಾಗಿ ಪರದಾಡುತ್ತಿದ್ದ ರೈತರಿಗೆ ಇದೀಗ ಕೆರೆಗಳಲ್ಲಿ ನೀರು ಕಾಣಿಸುತ್ತಿರುವುದು ಹೊಸ ಭರವಸೆ ಮೂಡಿಸಿದೆ.

### ಹಲವು ಕೆರೆಗಳಿಗೆ ಜಲಧಾರೆ

ಸಂಪಿಗೆಮರದ ಕೊಪ್ಪಲು ಗ್ರಾಮದ ಬಳಿಗೆ ಬಂದ ಎತ್ತಿನಹೊಳೆ ನೀರು ಅಲ್ಲಿಂದ ಹಳೇಬೀಡು ಭಾಗದ ಹಲವು ಕೆರೆಗಳಿಗೆ ಹರಿಯತೊಡಗಿತು. ಹೊಯ್ಸಳರ ಕಾಲದಿಂದಲೂ ಈ ಭಾಗದ ಕೃಷಿ ಹಾಗು ಜನಜೀವನಕ್ಕೆ ಆಸರೆಯಾಗಿರುವ ದ್ವಾರಸಮುದ್ರ ಕೆರೆ ಸೇರಿ ಅಡಗೂರು, ಬೆಳವಾಡಿ, ರಣಘಟ್ಟ, ಗೋಣಿಸೋಮನಹಳ್ಳಿ, ದ್ಯಾವಪ್ಪನಹಳ್ಳಿ, ಸೊಪ್ಪನಹಳ್ಳಿ, ಕ್ಯಾತನಕೆರೆ ಸೇರಿ ಇಪ್ಪತ್ತಕ್ಕೂ ಹೆಚ್ಚು ಕೆರೆಗಳಿಗೆ ನೀರು ಹರಿದು ಬಹುತೇಕ ಕೆರೆಗಳು ತುಂಬಿ ಕೋಡಿ ಬಿದ್ದಿವೆ.




CMYK CMYK CMYK CMYK

> ಮನೆಯ ಒಬ್ಬರಿಗೆ ಆರೋಗ್ಯ ಕೆಟ್ಟರೆ, ಮತ್ತೊಬ್ಬರಿಗೆ, ನಂತರ ಮತ್ತೊಬ್ಬರಿಗೆ, ಹೀಗೆ ಇಡೀ ಕುಟುಂಬವೇ ಹಬ್ಬದ ನಂತರ ವಿಶ್ರಾಂತಿಗೆ ಜಾರುವುದುಂಟು. ಹಾಗಾದರೆ ಹಬ್ಬದ ಸಂಭ್ರಮದ ಜೊತೆಗೆ ಆರೋಗ್ಯದ ತೊಂದರೆಯೂ ಒಂದು ಕೊಂಡರೆ ಇನ್ನೊಂದು ಉಚಿತ ಎಂಬ ಕೊಡುಗೆಯೇ? ಖಂಡಿತವಾಗಿಯೂ ಅಲ್ಲ. ನಮ್ಮ ಹಬ್ಬಗಳು ಆರೋಗ್ಯವನ್ನು ಹಾಳು ಮಾಡುವುದಕ್ಕಾಗಿ ಬಂದಿಲ್ಲ.

# ಹಬ್ಬ ಮುಗಿದ ಮೇಲೆ ದೇಹಕ್ಕೆ ರಜೆ ಏಕೆ?

ಶ್ರಾವಣ ಮಾಸ ಆರಂಭವಾಯಿತೆಂದರೆ ನಮ್ಮ ಬದುಕಿಗೆ ಒಂದು ಹೊಸ ಬಣ್ಣವೇ ಬರುತ್ತದೆ. ಒಂದರ ಹಿಂದೆ ಒಂದರಂತೆ ಬರುವ ಹಬ್ಬಗಳು, ಪೂಜೆ ಪುನಸ್ಕಾರಗಳು, ಬಂಧು ಬಳಗದ ಭೇಟಿ, ಹೊಸ ಬಟ್ಟೆಗಳು, ಮನೆಗಳ ಅಲಂಕಾರ, ಹೂವಿನ ಪರಿಮಳ, ಮಾವಿನ ತೋರಣ, ದೀಪಗಳ ಬೆಳಕು, ಮಂಟಪದ ಸೊಬಗು, ಇವೆಲ್ಲವೂ ನಮ್ಮ ಮನೆಗಳನ್ನು ಮಾತ್ರವಲ್ಲ, ಮನಸ್ಸುಗಳನ್ನೂ ಬೆಳಗಿಸುತ್ತವೆ.

ಹಬ್ಬವೆಂದರೆ ಕೇವಲ ಒಂದು ದಿನದ ಆಚರಣೆಯಲ್ಲ. ಅದು ಕುಟುಂಬ ಒಟ್ಟಾಗಿ ಸೇರುವ ಅವಕಾಶ. ಹಿರಿಯರ ಆಶೀರ್ವಾದ ಪಡೆಯುವ ಸಂದರ್ಭ. ಮಕ್ಕಳ ಸಂಭ್ರಮವನ್ನು ಕಣ್ತುಂಬಿಕೊಳ್ಳುವ ಕ್ಷಣ. ದೇವರ ಸ್ಮರಣೆಯೊಂದಿಗೆ ನಮ್ಮ ಬದುಕಿನಲ್ಲಿರುವ ದೈವೀಕತೆಯನ್ನು ಮತ್ತೊಮ್ಮೆ ಅನುಭವಿಸುವ ಸುಂದರ ಅವಕಾಶ. ಇನ್ನು ಹಬ್ಬದ ಊಟದ ವಿಚಾರವೇ ಬೇರೆ!



ಪ್ರತಿ ಹಬ್ಬಕ್ಕೂ ತನ್ನದೇ ಆದ ವಿಶೇಷ ಅಡುಗೆ. ಪಾಯಸ, ಹೋಳಿಗೆ, ಕಜ್ಜಾಯ, ವಿವಿಧ ಸಿಹಿ ಖಾರದ ತಿಂಡಿಗಳು. ಹಬ್ಬದ ಅಡುಗೆ ಮನೆಯ ಪರಿಮಳವೇ ಮನಸ್ಸನ್ನು ಹಬ್ಬದ ವಾತಾವರಣಕ್ಕೆ ಕರೆದೊಯ್ಯುತ್ತದೆ. ಸ್ನೇಹಿತರ ಮನೆಗೆ ಹೋಗಿ ಅವರೊಂದಿಗೆ ಊಟ ಮಾಡುವುದು, ನಮ್ಮ ಮನೆಯ ತಿನಿಸುಗಳನ್ನು ಅವರೊಂದಿಗೆ ಹಂಚಿಕೊಳ್ಳುವುದು, ಇವೆಲ್ಲವೂ ಹಬ್ಬದ ಸೌಂದರ್ಯದ ಭಾಗ. ಆದರೆ ಒಂದು ಪ್ರಶ್ನೆ ಮಾತ್ರ ಕಾಡುತ್ತದೆ. ಹಬ್ಬದ ದಿನ ಇಷ್ಟೊಂದು ಸಂತೋಷದಿಂದ ತುಂಬಿರುವ ಮನೆ, ಹಬ್ಬ ಮುಗಿದ ಮರುದಿನವೇ ಏಕೆ ಔಷಧಿಗಳ ಮನೆಯಾಗಿ ಬಿಡುತ್ತದೆ? ಜ್ವರ, ಮೈ ಕೈ ನೋವು, ಅಜೀರ್ಣ, ವಾಂತಿ, ಭೇದಿ, ನೆಗಡಿ, ತಲೆನೋವು, ಅಸಿಡಿಟಿ, ಎದೆ ಉರಿ, ಹೀಗೆ ಒಂದಲ್ಲ ಒಂದು ಆರೋಗ್ಯದ ತೊಂದರೆ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ.

ಮನೆಯ ಒಬ್ಬರಿಗೆ ಆರೋಗ್ಯ ಕೆಟ್ಟರೆ, ಮತ್ತೊಬ್ಬರಿಗೆ, ನಂತರ ಮತ್ತೊಬ್ಬರಿಗೆ, ಹೀಗೆ ಇಡೀ ಕುಟುಂಬ ವೇ ಹಬ್ಬದ ನಂತರ ವಿಶ್ರಾಂತಿಗೆ ಜಾರುವುದುಂಟು. ಹಾಗಾದರೆ ಹಬ್ಬದ ಸಂಭ್ರಮದ ಜೊತೆಗೆ ಆರೋಗ್ಯದ ತೊಂದರೆಯೂ ಒಂದು ಕೊಂಡರೆ ಇನ್ನೊಂದು ಉಚಿತ ಎಂಬ ಕೊಡುಗೆಯೇ? ಖಂಡಿತವಾಗಿಯೂ ಅಲ್ಲ. ನಮ್ಮ ಹಬ್ಬಗಳು ಆರೋಗ್ಯವನ್ನು ಹಾಳು ಮಾಡುವುದಕ್ಕಾಗಿ ಬಂದಿಲ್ಲ.

ಬದಲಿಗೆ, ಆಹಾರ, ವಿಹಾರ ಮತ್ತು ವಿಚಾರಗಳನ್ನು ಶೋಧಿಸಿಕೊಂಡು ದೇಹ ಮನಸ್ಸನ್ನು ಮತ್ತಷ್ಟು ಸಾತ್ತ್ವಿಕಗೊಳಿಸುವ ಅವಕಾಶಗಳಾಗಿವೆ. ಹಾಗಾದರೆ ಹಬ್ಬದ ದಿನ ಏನು ಗಮನಿಸಬೇಕು? ದಿನಚರಿ ಬದಲಾಗಬಾರದು: ಆಯುರ್ವೇದವು ಆರೋಗ್ಯ ರಕ್ಷಣೆಗೆ ದಿನಚರಿಗೆ ಬಹಳ ಮಹತ್ವ ನೀಡು ತ್ತದೆ. ಹಬ್ಬದ ದಿನವೆಂದರೆ ನಮ್ಮ ದೇಹದ ಜೈವಿಕ ಗಡಿಯಾರಕ್ಕೆ ರಜೆ ಕೊಡುವ ದಿನವಲ್ಲ. ಸಾಧ್ಯವಾದಷ್ಟು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದೇಳುವುದು ಉತ್ತಮ. ಸಾಮಾನ್ಯವಾಗಿ ಸೂರ್ಯೋದಯಕ್ಕೆ ಸುಮಾರು ಒಂದೂವರೆ ಗಂಟೆ ಮುಂಚಿನ ಸಮಯವನ್ನು ಬ್ರಾಹ್ಮೀ ಮುಹೂರ್ತವೆಂದು ಪರಿಗಣಿಸಲಾಗುತ್ತದೆ.

ಹಬ್ಬದ ದಿನ ಈ ಸಮಯದಲ್ಲಿ ಎದ್ದು ಧ್ಯಾನ, ಜಪ, ಪ್ರಾರ್ಥನೆ ಅಥವಾ ಮೌನ ಚಿಂತನೆಯಲ್ಲಿ ತೊಡಗಿ ಕೊಳ್ಳುವುದು ವಿಶೇಷವಾಗಿ ಶ್ರೇಷ್ಠ. ಬೆಳಗಿನ ಪ್ರಶಾಂತ ವಾತಾವರಣದಲ್ಲಿ ಮನಸ್ಸನ್ನು ಒಳಮುಖವಾಗಿಸಿಕೊಳ್ಳುವುದು ಸುಲಭ. ದೇಹ, ಇಂದ್ರಿಯ, ಮನಸ್ಸುಗಳನ್ನು ದೈವಚಿಂತನೆಯೊಂದಿಗೆ ಜೋಡಿಸಿಕೊಳ್ಳಲು ಇದು ಅತ್ಯುತ್ತಮ ಸಮಯ. ಇದಕ್ಕಾಗಿ ಹಿಂದಿನ ದಿನವೇ ನಮ್ಮ ಕೆಲಸಗಳನ್ನು ಬೇಗ ಮುಗಿಸಿ, ರಾತ್ರಿ ಸಮಯಕ್ಕೆ ಸರಿಯಾಗಿ ಮಲಗಬೇಕು. ಹಬ್ಬದ ಮುನ್ನರಾತ್ರಿ ನಿದ್ದೆಗೆಟ್ಟು, ಹಬ್ಬದ ದಿನ ಭಾರೀ ಊಟ ಮಾಡಿ, ಮಧ್ಯಾಹ್ನ ಗಂಟೆಗಟ್ಟಲೆ ಮಲಗುವುದು, ಇದು ಸಂಭ್ರಮವಲ್ಲ; ದೇಹದ ಮೇಲೆ ಮಾಡುವ ಹೆಚ್ಚುವರಿ ಹೊರೆ.

ಆಯುರ್ವೇದದಲ್ಲಿ ಹಗಲು ನಿದ್ದೆಯನ್ನು ಸಾಮಾನ್ಯವಾಗಿ ವರ್ಜಿಸಬೇಕೆಂದು ಹೇಳಲಾಗಿದೆ. ವಿಶೇಷವಾಗಿ ಅತಿಯಾದ ಹಗಲು ನಿದ್ದೆಯು ಕಫದೋಷವನ್ನು ಹೆಚ್ಚಿಸಿ, ಜೀರ್ಣಶಕ್ತಿಯನ್ನು ಕುಂದಿಸಿ ಹಲವು ತೊಂದರೆಗಳಿಗೆ ಕಾರಣವಾಗಬಹುದು. ಉಬ್ಬಸ, ಕೆಮ್ಮು, ತಲೆಭಾರ, ಪದೇಪದೇ ನೆಗಡಿ, ಆಹಾರದಲ್ಲಿ ರುಚಿ ಕಡಿಮೆಯಾಗುವುದು, ಜೀರ್ಣಶಕ್ತಿ ಕುಂದುವುದು, ಸ್ಥೌಲ್ಯ, ಮಧುಮೇಹ, ಹುಳಿತೇಗು, ಎದೆ ಉರಿ, ಪಿತ್ತ ವಾಂತಿ ಮುಂತಾದ ಸಮಸ್ಯೆಗಳೊಂದಿಗೆ ಸಂಬಂಧಿಸಬಹುದು. ಹೀಗಾಗಿ ಹಬ್ಬದ ದಿನವೂ ರಾತ್ರಿಯ ನಿಗೆ ಆದ್ಯತೆ, ಹಗಲಿನ ನಿದ್ದೆಗೆ ಮಿತಿ, ಇದು ಸ್ವಾಸ್ಥ್ಯ ರಕ್ಷಣೆಯ ಸರಳ ನಿಯಮ.

ಒಂದು ಅಭ್ಯಂಗ ಉಡುಗೊರೆ: ಹಬ್ಬದ ದಿನ ಮಾಡಬಹುದಾದ ಮತ್ತೊಂದು ಅತ್ಯುತ್ತಮ ಆಚರಣೆ ಅಭ್ಯಂಗ. ಸ್ನಾನಕ್ಕೂ ಮುನ್ನ, ಸಾಧ್ಯವಾದರೆ ಖಾಲಿ ಹೊಟ್ಟೆಯಲ್ಲಿ, ದೇಹಕ್ಕೆ ಬೆಚ್ಚಗಿನ ಎಣ್ಣೆಯನ್ನು ಹಚ್ಚಿಕೊಳ್ಳುವುದು ದೈನಂದಿನ ಆರೋಗ್ಯಪಾಲನೆಯ ಸುಂದರ ವಿಧಾನ. ಎಳ್ಳೆಣ್ಣೆ ಅಥವಾ ಸೂಕ್ತವಾದ ಸ್ನೇಹ ದ್ರವ್ಯವನ್ನು ಬಳಸಬಹುದು. ಮೊದಲು ತಲೆಗೆ ಎಣ್ಣೆ ಹಚ್ಚಿಕೊಳ್ಳಬಹುದು. ನಂತರ ಕಿವಿಗಳಿಗೆ ಎಣ್ಣೆಯ ಹನಿಗಳನ್ನು ಹಾಕಿ, ಮುಖಕ್ಕೆ ನಿಧಾನವಾಗಿ ಸವರಿಕೊಳ್ಳಬಹುದು.

ಮೂಗಿನ ಹೊಳ್ಳೆಗಳ ಒಳಭಾಗಕ್ಕೆ ಅತಿ ಸ್ವಲ್ಪ ಎಣ್ಣೆ ಹಚ್ಚುವ ಪದ್ಧತಿಯೂ ಇದೆ. ನಂತರ ಕತ್ತು, ಕೈ, ಎದೆ, ಹೊಟ್ಟೆ, ಬೆನ್ನು, ಪೃಷ್ಠ, ಕಾಲು ಮತ್ತು ಪಾದಗಳಿಗೆ ಎಣ್ಣೆಯನ್ನು ಅನುಲೋಮವಾಗಿ, ದೇಹದ ಸ್ವಾಭಾವಿಕ ರೋಮದ ದಿಕ್ಕಿಗೆ ಅನುಗುಣವಾಗಿ ಹಚ್ಚಬೇಕು. ಮುಖ, ಹೊಟ್ಟೆ ಮತ್ತು ಸಂಧಿ ಪ್ರದೇಶಗಳಲ್ಲಿ ಮೃದುವಾಗಿ ವರ್ತುಲಾಕಾರದಲ್ಲಿ ಹಚ್ಚಬಹುದು. ಇದಕ್ಕೆ ಗಂಟೆಗಟ್ಟಲೆ ಸಮಯ ಬೇಕಾಗಿಲ್ಲ.



ಸುಮಾರು ಐದು ಹಚ್ಚುವುದು, ಮತ್ತೊಂದು ಅದನ್ನು ದೇಹದ ಮೇಲೆ ಬಿಡುವುದು, ಒಟ್ಟು ಹತ್ ನಿಮಿಷಗಳ ಸರಳ ಅಭ್ಯಾಸವೇ ಸಾಕಾಗಬಹುದು. ನಂತರ ಬೆಚ್ಚಗಿನ ನೀರಿನಲ್ಲಿ ಸ್ನಾನ. ಹಬ್ಬದ ದಿನದ ಪೂಜೆ, ಚಟುವಟಿಕೆಗಳ ನಡುವೆ ದೇಹಕ್ಕೆ ನೀಡಬಹುದಾದ ಈ ಸಣ್ಣ ವಿಶ್ರಾಂತಿ ದಿನವಿಡೀ ಹಗುರತನ ಮತ್ತು ಆರಾಮವನ್ನು ನೀಡುತ್ತದೆ.

ಸಮಯಕ್ಕೆ ಊಟವಿರಲಿ: ಹಬ್ಬದ ದಿನ ನಮ್ಮ ಆಹಾರದ ಕ್ರಮವೇ ಹೆಚ್ಚು ಬದಲಾಗುತ್ತದೆ. ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ರಾತ್ರಿಯ ಊಟ, ನಮ್ಮ ಸಾಮಾನ್ಯ ಆಹಾರ ಕಾಲವನ್ನು ಸಾಧ್ಯವಾದಷ್ಟು ಕಾಪಾಡಿ ಕೊಳ್ಳುವುದು ಒಳಿತು. ಹಬ್ಬದ ದಿನ ಸಮಸ್ಯೆ ಸೃಷ್ಟಿಸುವುದು ಒಂದೇ ಒಂದು ದೊಡ್ಡ ಊಟವಲ್ಲ. ಊಟದ ನಡುವೆ ನಿರಂತರವಾಗಿ ಏನಾದರೂ ತಿನ್ನುತ್ತಲೇ ಇರುವುದು ಹೆಚ್ಚು ತೊಂದರೆ ಉಂಟುಮಾಡಬಹುದು.

ಪ್ರಸಾದ ಎಂದು ಸ್ವಲ್ಪ. ಇದನ್ನೂ ರುಚಿ ನೋಡಿ ಎಂದು ಮತ್ತೊಂದು ಸ್ವಲ್ಪ. ಇದು ವಿಶೇಷವಾಗಿ ನಿಮಗಾಗಿ ಮಾಡಿದ್ದೇವೆ ಎಂದು ಇನ್ನೊಂದು ತುಂಡು. ಹೀಗೆ ಹೊಟ್ಟೆಗೆ ಹಸಿವಿನ ಅವಕಾಶವೇ ಕೊಡದೆ ಆಗಾಗ್ಗೆ ತಿನ್ನುತ್ತಾ ಹೋದರೆ ಜಠರಾಗ್ನಿಯ ಮೇಲೆ ಹೆಚ್ಚುವರಿ ಹೊರೆ ಬೀಳುತ್ತದೆ. ಪರಿಣಾಮವಾಗಿ ಅಜೀರ್ಣ, ವಾಂತಿ, ಭೇದಿ, ಜ್ವರ, ತಲೆನೋವು, ಅಸಿಡಿಟಿ ಮುಂತಾದ ತೊಂದರೆಗಳು ಕಾಣಿಸಿಕೊಳ್ಳಬಹುದು. ಹಬ್ಬಕ್ಕಾಗಿ ತಯಾರಿಸಿದ ಎಲ್ಲ ಖಾದ್ಯಗಳನ್ನು ನಿರಾಕರಿಸಬೇಕೆಂದಲ್ಲ.

ಹಬ್ಬದ ಆಹಾರವನ್ನು ಆನಂದಿಸಿ; ಆದರೆ ನಿಗದಿತ ಆಹಾರ ಕಾಲದಲ್ಲಿ, ಹಸಿವಿಗೆ ತಕ್ಕ ಪ್ರಮಾಣದಲ್ಲಿ ಸೇವಿಸಿ. ಸಿಹಿ ಮತ್ತು ಕರಿದ ಪದಾರ್ಥಗಳು ಹೆಚ್ಚಿರುವ ಸಂದರ್ಭದಲ್ಲಿ ಜೀರ್ಣಕ್ರಿಯೆಗೆ ಸಹಾಯ ಮಾಡುವ ಕೆಲವು ಸರಳ ಪಾನೀಯಗಳನ್ನು ಬಳಸಬಹುದು. ಹಸಿ ಶುಂಠಿ, ಜೀರಿಗೆ, ಸೋಂಪು, ಏಲಕ್ಕಿ, ಲವಂಗ, ಧನಿಯ ಮುಂತಾದವುಗಳಲ್ಲಿ ಯಾವುದಾದರೂ ಒಂದನ್ನು ಸ್ವಲ್ಪ ಪ್ರಮಾಣದಲ್ಲಿ ನೀರಿನೊಂದಿಗೆ ಕುದಿಸಿ ಬೆಚ್ಚಗೆ ಸೇವಿಸುವುದು ಉಪಯುಕ್ತವಾಗಬಹುದು. ಆಹಾರದ ರುಚಿಯನ್ನು ಅನುಭವಿಸುವುದಕ್ಕೂ, ಜೀರ್ಣಕ್ರಿಯೆಯನ್ನು ಗೌರವಿಸುವುದಕ್ಕೂ ನಡುವೆ ಸಮತೋಲನ ಇರಬೇಕು.

ಉಪವಾಸ ಎಂದರೆ ಹೊಟ್ಟೆಗೆ ಶಿಕ್ಷೆಯಲ್ಲ: ನಮ್ಮ ಅನೇಕ ಹಬ್ಬಗಳೊಂದಿಗೆ ಉಪವಾಸವೂ ಅವಿಭಾಜ್ಯವಾಗಿ ಬೆಸೆದುಕೊಂಡಿದೆ. ಆದರೆ ಉಪವಾಸದ ಅರ್ಥವನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇವೆಯೇ? ಹಸಿವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ನೀರನ್ನೂ ಕುಡಿಯದೆ ಇರುವುದು, ದಿನವಿಡೀ ಏನೂ ತಿನ್ನದೆ, ನಂತರ ಒಂದೇ ಬಾರಿಗೆ ಜೀರ್ಣಕ್ಕೆ ಜಡವಾದ ಆಹಾರವನ್ನು ಸೇವಿಸುವುದು, ಉಪವಾಸವೆಂದು ಆಯುರ್ವೇದದ ದೃಷ್ಟಿಯಲ್ಲಿ ಆಹಾರ ಸೇವನೆಯೇ ಒಂದು ರೀತಿಯ ಯಜ್ಞ. ನಮ್ಮೊಳಗಿನ ಜಠರಾಗ್ನಿಗೆ ಆಹಾರವೆಂಬ ಆಹುತಿಯನ್ನು ಸಮರ್ಪಿಸುವ ಕ್ರಿಯೆಯಾಗಿ ಅದನ್ನು ನೋಡಬಹುದು. ಹೀಗಾಗಿ ಹಸಿವು ಮತ್ತು ಬಾಯಾರಿಕೆಯಂತಹ ಸಹಜ ಶಾರೀರಿಕ ವೇಗಗಳನ್ನು ನಿರಂತರವಾಗಿ ತಡೆದು, ನಂತರ ಜೀರ್ಣಿಸಲು ಕಷ್ಟವಾಗುವಷ್ಟು ಆಹಾರವನ್ನು ಒಂದೇ ಬಾರಿಗೆ ಸೇವಿಸುವುದು ದೇಹಕ್ಕೆ ಅನುಕೂಲಕರವಲ್ಲ. ಉಪವಾಸ ಎಂಬ ಪದವನ್ನು ನೋಡಿದಾಗ ಅದರ ಒಳಾರ್ಥ ಇನ್ನೂ ಸುಂದರವಾಗಿ ತೆರೆದುಕೊಳ್ಳುತ್ತದೆ.

ಉಪ ಎಂದರೆ ಸಮೀಪ; ವಾಸ ಎಂದರೆ ಇರುವುದು. ಅಂದರೆ ಉಪವಾಸವೆಂದರೆ ಕೇವಲ ಆಹಾರದಿಂದ ದೂರವಿರುವುದಲ್ಲ; ಪರಮಾತ್ಮನ ಸಮೀಪದಲ್ಲಿ ಇರುವ ಪ್ರಯತ್ನ. ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯಗಳಿಂದ ದೂರವಿದ್ದು, ಕಾಯ, ವಾಚ, ಮನಸ್ಸುಗಳನ್ನು ಸಾತ್ತ್ವಿಕವಾಗಿ ಇಟ್ಟು ಕೊಂಡು, ದೈವಚಿಂತನೆ ಮತ್ತು ಆತ್ಮಾವಲೋಕನದಲ್ಲಿ ತೊಡಗುವುದು ಉಪವಾಸದ ಆಂತರಿಕ ಉದ್ದೇಶ. ಆ ಸೂಕ್ಷ್ಮ ಅನುಭವಕ್ಕೆ ಅತಿಯಾದ ಆಹಾರಸೇವನೆ ಅಡ್ಡಿಯಾಗದಿರಲಿ ಎಂಬುದು ಉಪವಾಸದ ಒಂದು ಉದ್ದೇಶವಾಗಬಹುದು; ಆದರೆ ಉಪವಾಸವೆಂದರೆ ದೇಹವನ್ನು ಶೋಷಿಸುವುದಲ್ಲ. ಹಸಿವು ಕಂಡಾಗ ಅದನ್ನು ಗೌರವಿಸಬೇಕು.

ಆಹಾರ ಕಾಲದಲ್ಲಿ ಲಘು, ಸಾತ್ತ್ವಿಕ ಮತ್ತು ಸುಲಭವಾಗಿ ಜೀರ್ಣ ವಾಗುವ ಆಹಾರವನ್ನು ಅಗತ್ಯಕ್ಕೆ ತಕ್ಕಂತೆ ಸೇವಿಸಿ, ಉಳಿದ ಸಮಯದಲ್ಲಿ ಮನಸ್ಸನ್ನು ಪ್ರಾರ್ಥನೆ, ಜಪ, ಧ್ಯಾನ ಮತ್ತು ಸಚ್ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವುದು, ಇದು ಉಪವಾಸದ ಹೆಚ್ಚು ಅರ್ಥಪೂರ್ಣ ಆಯಾಮ.

ಹಬ್ಬದ ನಿಜವಾದ ಪ್ರಸಾದವೇನು?: ನಮ್ಮ ಪೂರ್ವಜರು ರೂಪಿಸಿದ ಆಚರಣೆಗಳಲ್ಲಿ ಕೇವಲ ಸಂಪ್ರದಾಯವಿರಲಿಲ್ಲ; ಅದರ ಹಿಂದೆ ಜೀವನ ಶಾಸ್ತ್ರವೂ ಇತ್ತು. ಹಬ್ಬದ ದಿನ ದೇಹವನ್ನು ಮಿತಿಮೀರಿಸಿ ದುಡಿಸುವುದೂ ಬೇಡ. ಮಿತಿಮೀರಿಸಿ ತಿನ್ನುವುದೂ ಬೇಡ. ನಿದ್ದೆಯನ್ನು ಕಡೆಗಣಿಸುವುದೂ ಬೇಡ. ಹಸಿವನ್ನು ನಿರ್ಲಕ್ಷಿಸುವುದೂ ಬೇಡ. ಆಹಾರದಲ್ಲಿ ಮಿತಿ, ನಿದ್ದೆಯಲ್ಲಿ ಶಿಸ್ತು, ಆಚರಣೆಯಲ್ಲಿ ಸಾತ್ತ್ವಿಕತೆ, ಮನಸ್ಸಿನಲ್ಲಿ ದೈವಚಿಂತನೆ, ಇದೇ ಹಬ್ಬದ ಆರೋಗ್ಯಕರ ಆಚರಣೆ.

ಹಬ್ಬ ಮುಗಿದ ಮರುದಿನವೂ ನಾವು ಅದೇ ಚೈತನ್ಯದಿಂದ ನಮ್ಮ ದೈನಂದಿನ ಬದುಕಿಗೆ ಮರಳಲು ಸಾಧ್ಯವಾಗಬೇಕು. ಹಬ್ಬದ ಸಂಭ್ರಮದ ನೆನಪುಗಳು ಉಳಿಯಲಿ; ಆದರೆ ಅದರ ಬೆನ್ನಿಗೆ ಜ್ವರ, ಅಜೀರ್ಣ, ಮೈಕೈ ನೋವು ಮತ್ತು ಅಸಿಡಿಟಿಯ ನೆನಪುಗಳು ಬರಬಾರದು. ನಮ್ಮ ಹಬ್ಬಗಳು ದೇಹವನ್ನು ದಂಡಿಸುವ ದಿನಗಳಾಗದೆ, ದೇಹ ಮತ್ತು ಮನಸ್ಸುಗಳನ್ನು ಮತ್ತಷ್ಟು ಶುದ್ಧಗೊಳಿಸುವ ದಿನಗಳಾಗಲಿ. ನಲ್ಮೆಯ ನಂತರ ನರಳಾಟ ಅನಿವಾರ್ಯವಲ್ಲ, ಸಂಭ್ರಮದ ಜೊತೆ ಸ್ವಾಸ್ಥ್ಯವೂ ಇರಬಹುದು.

ಹಬ್ಬದ ನಿಜವಾದ ಸಾರ್ಥಕತೆ, ಹಬ್ಬ ಮುಗಿದ ಮೇಲೂ ನಮ್ಮ ಆರೋಗ್ಯ ಮತ್ತು ಆನಂದ ಹಾಗೆಯೇ ಉಳಿದಿರುವುದರಲ್ಲಿ. ನಾವು ಆಚರಿಸುವ ಪ್ರತಿಯೊಂದು ಹಬ್ಬವೂ ನಮ್ಮ ಆರೋಗ್ಯ, ಆಯುಷ್ಯ, ಸಂಪತ್ತು, ಸಂತೋಷ ಮತ್ತು ಸನ್ಮಂಗಳವನ್ನು ವೃದ್ಧಿಸಲಿ ಎಂಬುದೇ ಆಯುರ್ವೇದದ ಆಶಯ. ಲೋಕಾಃ ಸಮಸ್ತಾಃ ಸುಖಿನೋ ಭವಂತು.

**– ಡಾ.** ಸಾಧನಾಶ್ರೀ ಪಿ,

---



# ಅಮೃತವೇ ವಿಷ: ಕೃತಕ ಬುದ್ಧಿಮತ್ತೆಯಿಂದ ಮಕ್ಕಳ ಬುದ್ಧಿಗೆ ಮಂಕು!

ಈ ಬಗ್ಗೆ ತುಂಬ ಸಲ ಎಚ್ಚರಿಸುತ್ತಲೇ ಇದ್ದೇನೆ. ತಂತ್ರಜ್ಞಾನ ಎಂಬುದು ನಮ್ಮ ಉಪಯೋಗಕ್ಕಾಗಿ ಬಳಕೆಯಾಗಬೇಕೇ ಹೊರತು, ಅದುವೇ ನಮ್ಮನ್ನು ನಿಯಂತ್ರಿಸುವ ಮಟ್ಟಕ್ಕೆ ನಾವು ನಮ್ಮನ್ನು ಒಡ್ಡಿಕೊಳ್ಳಬಾರದು. ಅತಿಯಾದರೆ ಅಮೃತವೂ ವಿಷ ಎಂಬ ಇಲ್ಲಿ ಖಚಿತವಾಗಿ ಅನ್ವಯವಾಗುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಶಾಲಾ ಮಕ್ಕಳು ತಮ್ಮ ಮನೆಕೆಲಸ ಮಾಡಲು ಕೃತಕ ಬುದ್ಧಿಮತ್ತೆ ಅಥವಾ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸುತ್ತಿದ್ದಾರೆ. ಇದರಿಂದ ಹೋಂ ವರ್ಕ್‌ನೋ ಕ್ಷಣ ಮಾತ್ರದಲ್ಲಿ ಮುಗಿಯುತ್ತಿದೆ, ಆದರೆ ಇದು ಮಕ್ಕಳ ಸ್ವಂತ ಆಲೋಚನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ ಮತ್ತು ಅವರ ಬುದ್ಧಿಯ ಬೆಳವಣಿಗೆಗೆ ದೊಡ್ಡ ತೊಡಕಾಗಿ ಪರಿಣಮಿಸುತ್ತಿದೆ ಎಂದು ಹೊಸ ಸಂಶೋಧನೆಗಳು ತೀವ್ರ ಎಚ್ಚರಿಕೆ ನೀಡಿವೆ.

ಡಾರ್ವಿನ್ನನ ವಿಕಾಸವಾದದ ಸಿದ್ಧಾಂತ ನಿಮಗೆ ಗೊತ್ತಲ್ಲ? ಅದನ್ನು ಸ್ಥೂಲವಾಗಿ ಹೇಳಬಹುದಾದರೆ, ದೇಹದ ಯಾವುದೇ ಅಂಗ, ಉದಾಹರಣೆಗೆ, ಬುದ್ಧಿ ಅಥವಾ ಮೇಧಾ ಶಕ್ತಿಯನ್ನು ಬಳಕೆ ಮಾಡಿದರೆ ಮಾತ್ರ ಅದು ಬೆಳವಣಿಗೆಯಾಗುತ್ತದೆ, ಬಳಸದೇ ಇದ್ದರೆ ಅವುಗಳು ನಶಿಸಿಹೋಗುತ್ತವೆ.

ಬೇಕಾಬಿಟ್ಟಿಯಾಗಿ ಎಲ್ಲದಕ್ಕೂ ಎಐ ಬಳಸಿದರೆ, (ಹಿಂದೆಲ್ಲ, ಉದಾಹರಣೆಗೆ, ಗುಣಾಕಾರದ ಉತ್ತರ ಪಡೆಯುವುದಕ್ಕೂ ಗೂಗಲ್ ಬಳಸುತ್ತಿದ್ದರು) ಆಲೋಚನಾ ಸಾಮರ್ಥ್ಯ, ಮೂಲಭೂತ ಕೌಶಲ್ಯದ ಬೆಳವಣಿಗೆ ಮತ್ತು ಜ್ಞಾನವು ದೀರ್ಘಕಾಲ ನೆನಪಿನಲ್ಲಿರುವುದು ಇವೆಲ್ಲ ಮಾರಕ ಹೊಡೆತ ಪಡೆಯುವ ಅಂಶಗಳು.

**ಏನಿದು ಎಐ?:** ಕೃತಕ ಬುದ್ಧಿಮತ್ತೆ ಎಂಬುದು ಮಾನವನ ಬುದ್ಧಿಶಕ್ತಿಯನ್ನು ಅನುಕರಿಸುವ ಸಂಕೀರ್ಣ ಕಂಪ್ಯೂಟರ್ ತಂತ್ರಜ್ಞಾನ. ಅಂದರೆ, ಮನುಷ್ಯರಂತೆ ಯೋಚಿಸುವುದು, ಲೆಕ್ಕ ಬಿಡಿಸುವುದು ಮತ್ತು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಸಾಮರ್ಥ್ಯವನ್ನು ಈ ಸಾಫ್ಟ್‌ವೇರ್‌ಗಳಿಗೆ ನೀಡಲಾಗಿರುತ್ತದೆ. ನಾವು ಕೇಳುವ ಯಾವುದೇ ಪ್ರಶ್ನೆಗೆ ಇದು ಕ್ಷಣಮಾತ್ರದಲ್ಲಿ ಸಂಪೂರ್ಣ ಪ್ರಬಂಧ ಅಥವಾ ಮನೆಕೆಲಸದ ಉತ್ತರಗಳನ್ನು ಸಿದ್ಧಪಡಿಸಿಕೊಡುತ್ತದೆ. ಇವೆಲ್ಲಕ್ಕೂ ಮಾನವನೇ ಊಡಿಸಿರುವ ಮಾಹಿತಿಯೇ ಮೂಲ ಆಧಾರ. ಈ ಮಾಹಿತಿಯ ಗುಚ್ಛವನ್ನೇ ಜಾಲಾಡುವ ಎಐ, ತನಗೆ ಒಡ್ಡಿದ ಪ್ರಶ್ನೆಗಳಿಗೆ ಬೇಕಾದ ಉತ್ತರವನ್ನು ವ್ಯವಸ್ಥಿತವಾಗಿ ನೀಡುತ್ತದೆ.

**ಕೃತಕ ಬುದ್ಧಿಮತ್ತೆಯಿಂದ ನಿಜದ ಬುದ್ಧಿಗೆ ಮಂಕು:** ಸ್ಟಾಕ್‌ಹೋಮ್ ಮತ್ತು ಹಾಂಕಾಂಗ್ ವಿಶ್ವವಿದ್ಯಾಲಯದ ಸಂಶೋಧಕರು 26,811 ವಿದ್ಯಾರ್ಥಿಗಳ ಮೇಲೆ ನಡೆಸಿದ ಅಧ್ಯಯನದ ಪ್ರಕಾರ, ಎಐ ಬಳಸಲು ಪ್ರಾರಂಭಿಸಿದ 6 ತಿಂಗಳಲ್ಲಿ ಮಕ್ಕಳ ಮನೆಕೆಲಸದ ಅಂಕಗಳು ಶೇ.18 ರಷ್ಟು ಹೆಚ್ಚಾದವು. ಆದರೆ, ಎಐ ಸಹಾಯವಿಲ್ಲದೆ ಸ್ವಂತವಾಗಿ ಬರೆದ ಮಾಸಿಕ ಪರೀಕ್ಷೆಗಳಲ್ಲಿ ಅವರ ಅಂಕಗಳು ಶೇ.20 ರಷ್ಟು ಕುಸಿದವು!



ಸಮಸ್ಯೆ ಏನೆಂದರೆ, ಶೇಕಡಾ 80ರಷ್ಟು ಮಕ್ಕಳು ವಿಷಯವನ್ನು ಅರ್ಥಮಾಡಿಕೊಳ್ಳಲು ಎಐ ಬಳಸುತ್ತಿಲ್ಲ. ಬದಲಿಗೆ, ತಮ್ಮ ಮಿದುಳಿಗೆ ಸ್ವಲ್ಪವೂ ಕೆಲಸ ನೀಡದೆ, ಎಐ ನೀಡಿದ ಉತ್ತರಗಳನ್ನೇ ಯಾಂತ್ರಿಕವಾಗಿ ಕಾಪಿ-ಪೇಸ್ಟ್ ಮಾಡುತ್ತಿದ್ದಾರೆ. ಮಕ್ಕಳು ಸ್ವಂತವಾಗಿ ಪ್ರಶ್ನೆಗಳಿಗೆ ಪರಿಹಾರ ಹುಡುಕಿದಾಗ ಮಾತ್ರ ಅವರ ಮಿದುಳಿನ ನರಕೋಶಗಳು ಚುರುಕಾಗಿ, ಬುದ್ಧಿವಿಕಾಸವಾಗುತ್ತದೆ. ಆದರೆ ಎಐ ಎಲ್ಲವನ್ನೂ ಸಿದ್ಧಪಡಿಸಿ ಕೊಡುವುದರಿಂದ, ಮಕ್ಕಳಲ್ಲಿ ಸೃಜನಶೀಲತೆ, ತಾರ್ಕಿಕ ಆಲೋಚನೆ ಮತ್ತು ಸ್ವತಂತ್ರವಾಗಿ ಯೋಚಿಸುವ ಸಾಮರ್ಥ್ಯ ಸಂಪೂರ್ಣವಾಗಿ ಕುಂಠಿತಗೊಳ್ಳುತ್ತಿದೆ.

**ತಂತ್ರಜ್ಞಾನವನ್ನು ಎಚ್ಚರಿಕೆಯಿಂದ ಬಳಸಿ:** ತಂತ್ರಜ್ಞಾನ ಎಷ್ಟೇ ಉಪಯುಕ್ತವಾಗಿದ್ದರೂ, ಅದನ್ನು ಎಚ್ಚರಿಕೆಯಿಂದ ಮತ್ತು ಮಿತಿಯಿಂದಲೇ ಬಳಸಬೇಕು. ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಯನದ ಪ್ರಕಾರ, ಎಐ ಅನ್ನು ಸಂಪೂರ್ಣವಾಗಿ ಮನೆಕೆಲಸ ಮಾಡಲು ಬಳಸುವ ಬದಲು, ಒಬ್ಬ ಶಿಕ್ಷಕನಂತೆ ಮಾರ್ಗದರ್ಶನ ಪಡೆಯಲು ಬಳಸಿದರೆ ಮಾತ್ರ ಪ್ರಯೋಜನಕಾರಿ. ಹಾಗೆ ಮಾಡಿದರೆ ಮಾತ್ರ ನಮ್ಮ ಬುದ್ಧಿಗೆ ಸ್ವಲ್ಪ ಕೆಲಸ ಸಿಕ್ಕಿ, ಅದಕ್ಕೆ ಸಾಣೆ ಹಿಡಿದಂತಾಗಿ ಅದು ಹೆಚ್ಚು ಚುರುಕುಗೊಳ್ಳಬಹುದು. ಇಲ್ಲದೇ ಹೋದರೆ ಮಂಕಾಗುತ್ತದೆ.

ಮಕ್ಕಳು ತಮ್ಮ ಆಲೋಚನಾ ಶಕ್ತಿಯನ್ನು ಬಲಿ ಕೊಟ್ಟು ಎಐ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾದರೆ, ಅದು ಅವರ ಶೈಕ್ಷಣಿಕ ಭವಿಷ್ಯಕ್ಕೆ ಮಾರಕವಾಗಲಿದೆ. ಆದ್ದರಿಂದ ತಂತ್ರಜ್ಞಾನವನ್ನು ಮಿತವಾಗಿ, ಜಾಗರೂಕತೆಯಿಂದ ಬಳಸುವುದು ಅತ್ಯಗತ್ಯ.

---

# ನಾವು ಮುಂದೆ ಸಾಗುತ್ತಿದ್ದೇವೆಯೇ ಅಥವಾ ಕೇವಲ ವೇಗವಾಗಿ ಸಾಗುತ್ತಿದ್ದೇವೆಯೇ?

ಜಗತ್ತು ಎಂದಿಗೂ ಇಷ್ಟು ಸಂಪರ್ಕ ಹೊಂದಿರಲಿಲ್ಲ. ಆದರೆ ಮಾನವೀಯತೆ ಎಂದಿಗೂ ಇಷ್ಟು ದೂರವಾಗಿರಲಿಲ್ಲ.

ನಾವು ಹೆಮ್ಮೆಯಿಂದ ಹೇಳುತ್ತೇವೆ ಜಗತ್ತು ಅಭಿವೃದ್ಧಿಯಾಗುತ್ತಿದೆ.

ಕಟ್ಟಡಗಳು ಎತ್ತರವಾಗುತ್ತಿವೆ.

ವಾಹನಗಳು ವೇಗವಾಗುತ್ತಿವೆ.

ಮೊಬೈಲ್‌ಗಳು ಸ್ಮಾರ್ಟ್ ಆಗುತ್ತಿವೆ.

ಕೃತಕ ಬುದ್ಧಿಮತ್ತೆ ಇನ್ನಷ್ಟು ಶಕ್ತಿಶಾಲಿಯಾಗುತ್ತಿದೆ.

ಆದರೆ ಭವಿಷ್ಯದತ್ತ ಓಡುವ ಈ ಸ್ಪರ್ಧೆಯಲ್ಲಿ ನಾವು ಒಂದು ಸರಳ ಪ್ರಶ್ನೆಯನ್ನು ಕೇಳುವುದನ್ನೇ ಮರೆತಿದ್ದೇವೆ:

**ನಾವು ಉತ್ತಮ ಮನುಷ್ಯರಾಗುತ್ತಿದ್ದೇವೆಯೇ?**

ಬಹುಶಃ ನಮ್ಮ ಕಾಲದ ಅತ್ಯಂತ ಅಸಹನೀಯ ಸತ್ಯವೇನೆಂದರೆ:

ತಂತ್ರಜ್ಞಾನದಲ್ಲಿ ನಾವು ಪ್ರಗತಿ ಸಾಧಿಸುತ್ತಿದ್ದೇವೆ; ಆದರೆ ಮಾನವೀಯತೆಯಲ್ಲಿ ಹಿಂದೆ ಸರಿಯುತ್ತಿದ್ದೇವೆ.

1. ಮಾಹಿತಿ ಹೆಚ್ಚಾಗಿದೆ, ಆದರೆ ವಿವೇಕ ಕಡಿಮೆಯಾಗಿದೆ

ಇಂದು ಒಂದು ಮಗು ಮೊಬೈಲ್ ಮೂಲಕ ಇಡೀ ಜಗತ್ತಿನ ಜ್ಞಾನವನ್ನು ಪಡೆಯಬಹುದು.

ಆದರೆ ಆ ಮಗುವಿಗೆ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಕಲಿಸಲು ನಾವು ಎಷ್ಟು ಪ್ರಯತ್ನಿಸುತ್ತಿದ್ದೇವೆ?

ನಾವು ಕೆಲವೇ ಕ್ಷಣಗಳಲ್ಲಿ ಯಾವುದೇ ಪ್ರಶ್ನೆಗೆ ಉತ್ತರ ಹುಡುಕಬಹುದು.

ಆದರೆ ನಮ್ಮ ಜೀವನದ ಉದ್ದೇಶವೇನು ಎಂಬ ಪ್ರಶ್ನೆಗೆ ಉತ್ತರಿಸಲು ಕಷ್ಟಪಡುತ್ತೇವೆ.

**ಗೂಗಲ್ ನಮಗೆ ಮಾಹಿತಿಯನ್ನು ನೀಡಬಹುದು; ಆದರೆ ಅದನ್ನು ಹೇಗೆ ಬಳಸಬೇಕು ಎಂಬುದನ್ನು ವಿವೇಕ ಮಾತ್ರ ಕಲಿಸಬಲ್ಲದು.**

2. ಎಲ್ಲರೊಂದಿಗೆ ಸಂಪರ್ಕವಿದೆ, ಆದರೆ ಆತ್ಮೀಯತೆ ಕಡಿಮೆಯಾಗಿದೆ

ಸಾಮಾಜಿಕ ಜಾಲತಾಣಗಳು ಕೋಟ್ಯಂತರ ಜನರನ್ನು ಸಂಪರ್ಕಿಸಿವೆ.

ಆದರೆ ನಮ್ಮ ಮನಸ್ಸು ಮುರಿದಾಗ ನಿಜವಾಗಿಯೂ ಕರೆ ಮಾಡಬಹುದಾದವರು ಎಷ್ಟು ಮಂದಿ?

ನೂರಾರು ಇದ್ದರೂ, ನಮ್ಮನ್ನು ನಿಜವಾಗಿ ಅರ್ಥಮಾಡಿಕೊಳ್ಳುವ ಒಬ್ಬ ವ್ಯಕ್ತಿಯೂ ಇಲ್ಲದ ಸ್ಥಿತಿ ಕೆಲವೊಮ್ಮೆ ಎದುರಾಗುತ್ತದೆ.

ಕುಟುಂಬದ ಸದಸ್ಯರು ಒಂದೇ ಮೇಜಿನ ಬಳಿ ಕುಳಿತಿರುತ್ತಾರೆ.

ಆದರೆ ಪ್ರತಿಯೊಬ್ಬರೂ ತಮ್ಮದೇ ಮೊಬೈಲ್ ಪರದೆಯನ್ನು ನೋಡುತ್ತಿರುತ್ತಾರೆ.

**ತಂತ್ರಜ್ಞಾನದಿಂದ ಜಗತ್ತನ್ನು ಚಿಕ್ಕದಾಗಿಸಿದ್ದೇವೆ; ಆದರೆ ಅಹಂಕಾರದಿಂದ ನಮ್ಮ ಹೃದಯಗಳನ್ನು ಚಿಕ್ಕದಾಗಿಸಿದ್ದೇವೆ.**

3. ಯಶಸ್ಸು ಮುಖ್ಯವಾಗಿದೆ; ಗುಣಚರಿತ್ರೆ ಅಲ್ಲ

ಇಂದು ಮಕ್ಕಳನ್ನು ನಾವು ಕೇಳುವುದು:

ಎಷ್ಟು ಅಂಕ ಗಳಿಸಿದ್ದೀಯ?

ಯಾವ ಉದ್ಯೋಗ ಪಡೆಯುತ್ತೀಯ?

ಎಷ್ಟು ಸಂಪಾದಿಸುತ್ತೀಯ?

ಆದರೆ ಎಷ್ಟು ಬಾರಿ ನಾವು ಕೇಳುತ್ತೇವೆ:

**ನೀನು ಎಂತಹ ಮನುಷ್ಯನಾಗುತ್ತೀಯ?**

ಉತ್ತಮ ವೃತ್ತಿಪರರನ್ನು ಮಾತ್ರ ಸೃಷ್ಟಿಸುವ, ಆದರೆ ಜವಾಬ್ದಾರಿಯುತ ಮನುಷ್ಯರನ್ನು ಸೃಷ್ಟಿಸದ ಸಮಾಜವನ್ನು ನಿಜವಾಗಿಯೂ ಅಭಿವೃದ್ಧಿ ಹೊಂದಿದ ಸಮಾಜವೆಂದು ಕರೆಯಬಹುದೇ?

**ಪದವಿ ನಿಮಗೆ ಉದ್ಯೋಗ ಕೊಡಬಹುದು; ಆದರೆ ಗುಣಚರಿತ್ರೆ ನಿಮ್ಮನ್ನು ಮೌಲ್ಯಯುತ ವ್ಯಕ್ತಿಯನ್ನಾಗಿ ಮಾಡುತ್ತದೆ.**

4. ಮನುಷ್ಯನನ್ನು ಅವನ ಬಳಿ ಇರುವ ವಸ್ತುಗಳಿಂದ ಅಳೆಯುತ್ತಿದ್ದೇವೆ

ಇಂದು ವ್ಯಕ್ತಿಯ ಮೌಲ್ಯವನ್ನು ಹೆಚ್ಚಾಗಿ ಯಾವುದರಿಂದ ಅಳೆಯಲಾಗುತ್ತಿದೆ?

★ ಕಾರು
★ ಮನೆ
★ ಸಂಬಳ
★ ಬಟ್ಟೆ
★ ಮೊಬೈಲ್
★ ಸಾಮಾಜಿಕ ಸ್ಥಾನಮಾನ
★ ಪದವಿ ಪ್ರಶಸ್ತಿ

ಆದರೆ ಇವುಗಳಲ್ಲಿ ಯಾವುದೂ ಒಬ್ಬ ವ್ಯಕ್ತಿ ದಯಾಳುವನೇ, ಪ್ರಾಮಾಣಿಕನೇ, ಕರುಣೆಯುಳ್ಳವನೋ ಅಥವಾ ನಂಬಿಕೆಗೆ ಅರ್ಹನೋ ಎಂಬುದನ್ನು ಹೇಳುವುದಿಲ್ಲ.

**ಮನುಷ್ಯನ ಮೌಲ್ಯವನ್ನು ಅವನ ಗುಣಗಳಿಂದ ಅಳೆಯಬೇಕಾದ ನಾವು, ಅವನ ಆಸ್ತಿಪಾಸ್ತಿಗಳಿಂದ ಅಳೆಯಲು ಪ್ರಾರಂಭಿಸಿದ್ದೇವೆ.**

5. ಮಕ್ಕಳಿಗೆ ಕಾಳಜಿ ವಹಿಸುವುದಕ್ಕಿಂತ ಸ್ಪರ್ಧಿಸುವುದನ್ನು ಕಲಿಸುತ್ತಿದ್ದೇವೆ



ಸ್ಪರ್ಧೆ ವಿಜೇತರನ್ನು ಸೃಷ್ಟಿಸಬಹುದು.

**ಆದರೆ ಕರುಣೆ ಮನುಷ್ಯರನ್ನು ಸೃಷ್ಟಿಸುತ್ತದೆ.**

ನಾವು ಮಕ್ಕಳಿಗೆ ಹೇಳುತ್ತೇವೆ:

ಮೊದಲಿಗರಾಗು.

ಅದರ ಜೊತೆಗೆ ಹೀಗೆ ಹೇಳಬೇಕಲ್ಲವೇ?

**ಯಾರಾದರೂ ಹಿಂದೆ ಉಳಿದಿದ್ದರೆ, ಅವರನ್ನು ಮುಂದೆ ಬರಲು ಸಹಾಯ ಮಾಡು.**

ಏಕೆಂದರೆ ಜೀವನವೆಂದರೆ ಕೇವಲ ಗುರಿ ತಲುಪುವುದಲ್ಲ.

ಮೇಲಕ್ಕೆ ಏರುವಾಗ ನೀನು ಎಷ್ಟು ಜನರನ್ನು ಮೇಲಕ್ಕೆತ್ತಿದ್ದೀಯೆ ಎಂಬುದೂ ಮುಖ್ಯ.

6. ತಂತ್ರಜ್ಞಾನ ಸ್ಮಾರ್ಟ್ ಆಗುತ್ತಿದೆ ನಾವು?

ಕೃತಕ ಬುದ್ಧಿಮತ್ತೆ ಬರೆಯಬಲ್ಲದು.

ಲೆಕ್ಕ ಹಾಕಬಲ್ಲದು.

ಚಿತ್ರಗಳನ್ನು ಸೃಷ್ಟಿಸಬಲ್ಲದು.

ಅಪಾರ ಪ್ರಮಾಣದ ಮಾಹಿತಿಯನ್ನು ವಿಶ್ಲೇಷಿಸಬಲ್ಲದು.

ಆದರೆ ಏನು ಮಾಡಬೇಕು, ಏನು ಮಾಡಬಾರದು ಎಂಬ ನೈತಿಕ ಜವಾಬ್ದಾರಿಯನ್ನು ಅದು ನಮ್ಮ ಬದಲಿಗೆ ನಿರ್ಧರಿಸಬಾರದು.

ಅಪಾಯವೆಂದರೆ ಯಂತ್ರಗಳು ಮನುಷ್ಯರಿಗಿಂತ ಹೆಚ್ಚು ಬುದ್ಧಿವಂತರಾಗುವುದು ಮಾತ್ರವಲ್ಲ.

ಇನ್ನೊಂದು ದೊಡ್ಡ ಅಪಾಯವೆಂದರೆ:

**ಯಂತ್ರಗಳು ನಮ್ಮ ಪರವಾಗಿ ಯೋಚಿಸುವಷ್ಟು ಅವುಗಳ ಮೇಲೆ ನಾವು ಅವಲಂಬಿತರಾಗುವುದು.**

**ತಂತ್ರಜ್ಞಾನ ನಮ್ಮ ಸೇವಕವಾಗಿರಬೇಕು ನಮ್ಮ ಯಜಮಾನನಾಗಬಾರದು.**

7. ಸೇತುವೆ ಕಟ್ಟುವುದಕ್ಕಿಂತ ಗೋಡೆ ಕಟ್ಟುವುದರಲ್ಲಿ ನಾವು ಪರಿಣತರಾಗಿದ್ದೇವೆ

ಧರ್ಮ, ಭಾಷೆ, ಜಾತಿ, ದೇಶ, ರಾಜಕೀಯ, ಸಿದ್ಧಾಂತ ಮತ್ತು ಸಾಮಾಜಿಕ ಸ್ಥಾನಮಾನಗಳು ನಮ್ಮನ್ನು ವಿಭಜಿಸುವ ಕಾರಣಗಳಾಗುತ್ತಿವೆ.

ಆದರೆ ಈ ಎಲ್ಲ ಗುರುತುಗಳಿಗಿಂತ ಮೊದಲು ನಾವು ಮನುಷ್ಯರು.

ಭೂಮಿ ನಮ್ಮ ಗಡಿಗಳನ್ನು ಗುರುತಿಸುವುದಿಲ್ಲ.

ಆಕಾಶ ಮಳೆ ನೀಡುವ ಮೊದಲು ನಮ್ಮ ಧರ್ಮವನ್ನು ಕೇಳುವುದಿಲ್ಲ.

ಸೂರ್ಯ ಬೆಳಕು ನೀಡುವ ಮೊದಲು ನಮ್ಮ ಜಾತಿಯನ್ನು ಕೇಳುವುದಿಲ್ಲ.

**ನಾವು ಭೂಮಿಯ ಮೇಲೆ ಗಡಿಗಳನ್ನು ಎಳೆದೆವು; ನಂತರ ನಾವು ಎಳೆದ ಗಡಿಗಳಿಗಾಗಿ ಪರಸ್ಪರ ಹೋರಾಡಲು ಪ್ರಾರಂಭಿಸಿದೆವು.**

8. ಭವಿಷ್ಯದ ಪೀಳಿಗೆಯ ಸಂಪನ್ಮೂಲಗಳನ್ನು ಬಳಸುತ್ತಾ ಅದನ್ನು ಅಭಿವೃದ್ಧಿ ಎನ್ನುತ್ತಿದ್ದೇವೆ

ನಗರಗಳನ್ನು ನಿರ್ಮಿಸಲು ಕಾಡುಗಳನ್ನು ಕಡಿದುಹಾಕುತ್ತೇವೆ.

ನದಿಗಳನ್ನು ಕಲುಷಿತಗೊಳಿಸಿ ನಂತರ ಶುದ್ಧ ನೀರನ್ನು ಖರೀದಿಸುತ್ತೇವೆ.

ನೈಸರ್ಗಿಕ ಆವಾಸಸ್ಥಾನಗಳನ್ನು ನಾಶಮಾಡಿ ನಂತರ ಹವಾಮಾನ ಬದಲಾವಣೆಯ ಪರಿಣಾಮಗಳ ಬಗ್ಗೆ ಚಿಂತಿಸುತ್ತೇವೆ.

ನಾವು ಭವಿಷ್ಯದ ಪೀಳಿಗೆಯಿಂದ ಸಂಪನ್ಮೂಲಗಳನ್ನು ಸಾಲವಾಗಿ ಪಡೆಯುತ್ತಿದ್ದೇವೆ ಅವರ ಅನುಮತಿಯಿಲ್ಲದೆ.

**ಭೂಮಿಗೆ ನಮ್ಮ ಅಗತ್ಯವಿಲ್ಲ.**

**ನಮಗೆ ಭೂಮಿಯ ಅಗತ್ಯವಿದೆ.**



ಪ್ರಕೃತಿಯನ್ನು ನಾಶಮಾಡುವ ಅಭಿವೃದ್ಧಿ ನಿಜವಾದ ಅಭಿವೃದ್ಧಿಯಲ್ಲ.

**ಅದು ವಿನಾಶದತ್ತ ಸಾಗುವ ವೇಗದ ದಾರಿ.**

9. ಮಾತನಾಡುವುದರಲ್ಲಿ ಪರಿಣತರಾಗಿದ್ದೇವೆ; ಕೇಳುವುದನ್ನು ಮರೆತಿದ್ದೇವೆ

ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯ ಹೇಳಬೇಕು.

ಆದರೆ ಇನ್ನೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಎಷ್ಟು ಮಂದಿ ಸಿದ್ಧರಿದ್ದಾರೆ?

ನಾವು ಅರ್ಥಮಾಡಿಕೊಳ್ಳಲು ಕೇಳುವುದಿಲ್ಲ.

ಉತ್ತರಿಸಲು ಕೇಳುತ್ತೇವೆ.

ಕಥೆಯನ್ನು ತಿಳಿಯುವ ಮೊದಲೇ ತೀರ್ಪು ನೀಡುತ್ತೇವೆ.

ಯೋಚಿಸುವ ಮೊದಲೇ ಪ್ರತಿಕ್ರಿಯಿಸುತ್ತೇವೆ.

**ಜೋರಾಗಿ ಮಾತನಾಡುವ ಧ್ವನಿ ವಾದವನ್ನು ಗೆಲ್ಲಬಹುದು; ಆದರೆ ಕೇಳುವ ಹೃದಯ ಸಂಬಂಧವನ್ನು ಉಳಿಸಬಹುದು.**

**ಹಾಗಾದರೆ, ಜಗತ್ತು ನಿಜವಾಗಿಯೂ ತಪ್ಪು ದಿಕ್ಕಿನಲ್ಲಿ ಸಾಗುತ್ತಿದೆಯೇ?**

**ಕೊನೆಯ ಪ್ರಶ್ನೆ**

ಒಂದು ದಿನ ಮಾನವನು ಮಂಗಳ ಗ್ರಹದಲ್ಲಿ ನಗರಗಳನ್ನು ನಿರ್ಮಿಸಬಹುದು.

ಮನುಷ್ಯನಂತೆ ಯೋಚಿಸುವ ಯಂತ್ರಗಳನ್ನು ಸೃಷ್ಟಿಸಬಹುದು.

ಇಂದಿಗಿಂತಲೂ ದೂರದ ಗ್ರಹಗಳಿಗೆ ಪ್ರಯಾಣಿಸಬಹುದು.

ಹೆಚ್ಚು ವರ್ಷ ಬದುಕಬಹುದು.

**ಆದರೆ ಈ ಪ್ರಯಾಣದಲ್ಲಿ ಕರುಣೆ, ಪ್ರಾಮಾಣಿಕತೆ,**




## ಜಗತ್ತು ನಿಜವಾಗಿಯೂ ತಪ್ಪು ದಿಕ್ಕಿನಲ್ಲಿ ಸಾಗುತ್ತಿದೆಯೇ?

- ಬಹುಶಃ ಜಗತ್ತೇ ಸಮಸ್ಯೆಯಲ್ಲ.
- ನಮ್ಮ ಆದ್ಯತೆಗಳೇ ಸಮಸ್ಯೆ.
- ವಿಜ್ಞಾನ ಸಮಸ್ಯೆಯಲ್ಲ.
- ತಂತ್ರಜ್ಞಾನ ಸಮಸ್ಯೆಯಲ್ಲ.
- ಹಣ ಸಮಸ್ಯೆಯಲ್ಲ.
- ಅಭಿವೃದ್ಧಿಯೂ ಸಮಸ್ಯೆಯಲ್ಲ.
- ಜನರಿಗಿಂತ ಅಭಿವೃದ್ಧಿಯೇ ಮುಖ್ಯವಾದಾಗ ಸಮಸ್ಯೆ ಆರಂಭವಾಗುತ್ತದೆ.
- ಹಣವು ನೈತಿಕತೆಗಿಂತ ಮುಖ್ಯವಾದಾಗ.
- ಅಂಕಗಳು ಕಲಿಕೆಗಿಂತ ಮುಖ್ಯವಾದಾಗ.
- ಫಾಲೋವರ್ಸ್ ಸ್ನೇಹಕ್ಕಿಂತ ಮುಖ್ಯವಾದಾಗ.
- ಅನುಕೂಲತೆ ಜವಾಬ್ದಾರಿಗಿಂತ ಮುಖ್ಯವಾದಾಗ.
- ಗೆಲುವು ಮಾನವೀಯತೆಗಿಂತ ಮುಖ್ಯವಾದಾಗ.
- ನಾವು ಏನು ಬದಲಾಯಿಸಬೇಕು?
- ಬಹುಶಃ ನಮಗೆ ಮತ್ತೊಂದು ಕ್ರಾಂತಿಯ ಅಗತ್ಯವಿಲ್ಲ.
- ನಮಗೆ ಮಾನವೀಯತೆಯ ಕ್ರಾಂತಿಯ ಅಗತ್ಯವಿದೆ.
- ವೃತ್ತಿಜೀವನವನ್ನು ಮಾತ್ರವಲ್ಲ, ಗುಣಚರಿತ್ರೆಯನ್ನು ನಿರ್ಮಿಸುವ ಶಾಲೆಗಳು ಬೇಕು.
- ಯಶಸ್ಸನ್ನು ಮಾತ್ರವಲ್ಲ, ಮೌಲ್ಯಗಳನ್ನು ಕಲಿಸುವ ಕುಟುಂಬಗಳು ಬೇಕು.
- ಜನರನ್ನು ದೂರ ಮಾಡುವುದಲ್ಲ, ಜನರನ್ನು ಸಂಪರ್ಕಿಸುವ ತಂತ್ರಜ್ಞಾನ ಬೇಕು.
- ತಮ್ಮನ್ನು ಸೇವಿಸುವ ನಾಯಕತ್ವವಲ್ಲ, ಜನರನ್ನು ಸೇವಿಸುವ ನಾಯಕತ್ವ ಬೇಕು.
- ಪ್ರಕೃತಿಯನ್ನು ನಾಶಮಾಡುವ ಅಭಿವೃದ್ಧಿಯಲ್ಲ, ಪ್ರಕೃತಿಯನ್ನು ರಕ್ಷಿಸುವ ಅಭಿವೃದ್ಧಿ ಬೇಕು.
- ಮಕ್ಕಳಿಗೆ ಕೇವಲ ಹೇಗೆ ಬದುಕು ಸಂಪಾದಿಸಬೇಕು ಎಂಬುದಲ್ಲ,
- ಹೇಗೆ ಬದುಕಬೇಕು ಎಂಬುದನ್ನೂ ಕಲಿಸುವ ಶಿಕ್ಷಣ ಬೇಕು.

**ಮಾನವೀಯತೆ ಮತ್ತು ಜವಾಬ್ದಾರಿಯನ್ನು ಕಳೆದುಕೊಂಡರೆ ಅದನ್ನು ನಿಜವಾದ ಪ್ರಗತಿ ಎಂದು ಕರೆಯಬಹುದೇ?**

ಬಹುಶಃ ಭವಿಷ್ಯದ ಅತ್ಯಂತ ದೊಡ್ಡ ಸಾಧನೆ ಮತ್ತೊಂದು ಬುದ್ಧಿವಂತ ಯಂತ್ರವನ್ನು ನಿರ್ಮಿಸುವುದಲ್ಲ.

ಒಬ್ಬ ಉತ್ತಮ, ವಿವೇಕಿ ಮತ್ತು ಮಾನವೀಯತೆಯುಳ್ಳ ಮನುಷ್ಯನನ್ನು ನಿರ್ಮಿಸುವುದೇ ಆಗಿರಬಹುದು.

**ಜಗತ್ತಿಗೆ ಇನ್ನಷ್ಟು ಶಕ್ತಿಶಾಲಿ ಮನುಷ್ಯರು ಬೇಕಾಗಿಲ್ಲ.**

**ಜಗತ್ತಿಗೆ ಇನ್ನಷ್ಟು ಶಕ್ತಿಶಾಲಿ ಮೌಲ್ಯಗಳು ಬೇಕು.**

**ಒಂದು ರಾತ್ರಿಯಲ್ಲಿ ಇಡೀ ಜಗತ್ತನ್ನು ಬದಲಾಯಿಸುವ ಅಗತ್ಯವಿಲ್ಲ.**

**ಕನ್ನಡಿಯಲ್ಲಿರುವ ಮನುಷ್ಯನನ್ನು ಬದಲಾಯಿಸುವುದರಿಂದ ಪ್ರಾರಂಭಿಸೋಣ.**

ಮತ್ತು ನಮ್ಮ ಪೀಳಿಗೆಯ ಅತ್ಯಂತ ಮಹತ್ವದ ಪ್ರಶ್ನೆ ಬಹುಶಃ:

ಮಾನವೀಯತೆ ಎಷ್ಟು ದೂರ ಹೋಗಬಹುದು? ಎಂಬುದಲ್ಲ.

**ನಾವು ಎಷ್ಟು ದೂರ ಹೋದರೂ, ನಮ್ಮೊಂದಿಗೆ ಎಷ್ಟು ಮಾನವೀಯತೆಯನ್ನು ಕೊಂಡೊಯ್ಯುತ್ತೇವೆಯೇ?**

ಯೋಚಿಸಿ, ಸಮಯವಿರದಿರೆ ಸಮಯ ಮಾಡಿಕೊಂಡು ಯೋಚಿಸಿ!! ಈಗ ಯೋಚಿಸದಿದ್ದರೆ ಮುಂದೆ ಪಶ್ಚಾತಾಪ ಪಡಲೂ ಸಮಯವಿರುವುದಿಲ್ಲ…

# ಬರಪೀಡಿತ ಘೋಷಣೆಗಾಗಿ ಸೆ.17ರಂದು ಬೇಲೂರು ಬಂದ್

## ಆನೆ-ಮಾನವ ಸಂಘರ್ಷಕ್ಕೆ ಪರಿಹಾರ | ಬಗರ್ ಹುಕುಂ ಸಮಸ್ಯೆ ಬಗೆಹರಿಸಲು ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ಮಳೆ ಕೊರತೆಯಿಂದ ಬೆಳೆಗಳು ಒಣಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಕಾಡಾನೆಗಳ ಹಾವಳಿಯಿಂದ ಬೆಳೆ ಹಾಗೂ ಆಸ್ತಿ ಪಾಸ್ತಿ ನಷ್ಟವಾಗುತ್ತಿದೆ. ಇದರ ಜೊತೆಗೆ ಬಗರ್ ಹುಕುಂ ಸಮಸ್ಯೆಯೂ ರೈತರನ್ನು ಕಾಡುತ್ತಿದೆ. ಇಷ್ಟೆಲ್ಲಾ ಗಂಭೀರ ಸಮಸ್ಯೆಗಳ ನಡುವೆಯೂ ಸರ್ಕಾರ ಹಾಗೂ ಜನಪ್ರತಿನಿಧಿಗಳು ರೈತರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ, ಬೇಲೂರು ತಾಲೂಕನ್ನು ಬರಪೀಡಿತ ಎಂದು ಘೋಷಿಸುವುದು ಸೇರಿದಂತೆ ಮೂರು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆಪ್ಟೆಂಬರ್ 17ರಂದು ಬೇಲೂರು ಬಂದ್‌ಗೆ ತೀರ್ಮಾನಿಸಲಾಗಿದೆ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌಡ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ರೈತರು ಹಾಗೂ ವಿವಿಧ ಸಂಘಟನೆಗಳ ಸಭೆಯಲ್ಲಿ ಮಾತನಾಡಿದ ಅವರು, ರೈತರ ಸಮಸ್ಯೆಗಳು ದೊಡ್ಡ ಮಟ್ಟದಲ್ಲಿ ಬಿಗಡಾಯಿಸಿವೆ.



ಈ ಕುರಿತು ಈಗಾಗಲೇ ಹತ್ತಾರು ಹೋರಾಟಗಳನ್ನು ನಡೆಸಲಾಗಿದೆ. ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ವಿಧಾನಸೌಧದವರೆಗೂ ತೆರಳಿ ಸರ್ಕಾರದ ಗಮನ ಸೆಳೆಯಲಾಗಿದೆ. ಆದರೂ ರೈತರ ಸಮಸ್ಯೆಗಳ ಬಗ್ಗೆ ಸರ್ಕಾರ ಹಾಗೂ ಜನಪ್ರತಿನಿಧಿಗಳು ನಿರೀಕ್ಷಿತ ಮಟ್ಟದಲ್ಲಿ ಬೆಳಕು ಚೆಲ್ಲುವ ಕೆಲಸ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರು ಇಂದು ಒಂದೇ ಸಮಸ್ಯೆಯಿಂದ ಬಳಲುತ್ತಿಲ್ಲ. ಒಂದು ಕಡೆ ಮಳೆಯಿಲ್ಲದೆ ಬೆಳೆಗಳು ನಾಶವಾಗುತ್ತಿವೆ, ಮತ್ತೊಂದೆಡೆ ಆನೆಗಳ ಹಾವಳಿ ರೈತರ ನೆಮ್ಮದಿಯನ್ನೇ ಕಸಿದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ರೈತರ ನೆರವಿಗೆ ಧಾವಿಸಬೇಕಿತ್ತು. ಆದರೆ ಸಮಸ್ಯೆ ಬಗೆಹರಿಸುವ ಬದಲು ನಿರ್ಲಕ್ಷ್ಯ ಮುಂದುವರಿದರೆ ರೈತರು ಇನ್ನಷ್ಟು ಬಲವಾದ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬೇಲೂರು ತಾಲೂಕನ್ನು ಕೂಡಲೇ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಆನೆಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಬಗರ್ ಹುಕುಂ ಸೇರಿದಂತೆ ರೈತರ ಜಮೀನು ಹಾಗೂ ಸಾಗುವಳಿ ಸಮಸ್ಯೆಗಳನ್ನು ಬಗೆಹರಿಸಬೇಕು. ಈ ಮೂರು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಂದ್ ನಡೆಸಲಾಗುತ್ತಿದ್ದು, ತಾಲೂಕಿನ ನಾಗರಿಕರು, ವರ್ತಕರು, ಕಾರ್ಮಿಕರು, ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರು ಪಕ್ಷಾತೀತವಾಗಿ ಸ್ವಯಂಪ್ರೇರಿತವಾಗಿ ಬಂದ್‌ಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಬಂದ್ ನಡೆಸಿದ ಬಳಿಕವೂ ಸರ್ಕಾರ ರೈತರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಹೋರಾಟವನ್ನು ಇಲ್ಲಿಗೇ ನಿಲ್ಲಿಸುವುದಿಲ್ಲ. ಜಿಲ್ಲಾಡಳಿತ ಹಾಗೂ ಸರ್ಕಾರದ ಗಮನ ಸೆಳೆಯಲು ಮುಂದಿನ ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆ ಸೇರಿದಂತೆ ಇನ್ನಷ್ಟು ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು. ರೈತರ ಸಮಸ್ಯೆಗಳಿಗೆ ಪರಿಹಾರ ದೊರೆಯುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ಭೋಗ ಮಲ್ಲೇಶ್ ಮಾತನಾಡಿ, ಮಲೆನಾಡು ಭಾಗದಲ್ಲಿ ಮಳೆ ಕೊರತೆಯಿಂದ ಜೋಳ ಸೇರಿದಂತೆ ವಿವಿಧ ಬೆಳೆಗಳು ಸಂಪೂರ್ಣವಾಗಿ ಹಾನಿಗೊಳಗಾಗಿವೆ. ಜೋಳದ ಬೆಳೆ ಬಹುತೇಕ ನಾಶವಾಗಿದ್ದು, ರೈತರು ಮಾಡಿರುವ ಬಂಡವಾಳವೂ ವಾಪಸ್ ಬಾರದಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಕಾಫಿ, ಮೆಣಸು, ಏಲಕ್ಕಿ ಸೇರಿದಂತೆ ತೋಟಗಾರಿಕಾ ಬೆಳೆಗಳ ಮೇಲೂ ಮಳೆಯ ಕೊರತೆ ತೀವ್ರ ಪರಿಣಾಮ ಬೀರಿದೆ. ಕಾಫಿ ಕಾಯಿ ಉದುರುತ್ತಿದ್ದು, ಗಿಡಗಳು ಒಣಗುತ್ತಿವೆ. ಮೆಣಸು ಕೂಡ ಉದುರಿ ಹೋಗುತ್ತಿದೆ. ಅಧಿಕಾರಿಗಳು ಕಚೇರಿಯಲ್ಲಿ ಕುಳಿತು ವರದಿ ಪಡೆಯುವ ಬದಲು ತೋಟಗಳಿಗೆ ತೆರಳಿ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಇಲ್ಲಿಯೇ ಪ್ರತಿಭಟನೆ, ಬಂದ್ ನಡೆಸುವುದರಿಂದ ಮಾತ್ರ ಸರ್ಕಾರದ ಗಮನ ಸೆಳೆಯಲು ಸಾಧ್ಯವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಗಮನವನ್ನು ನೇರವಾಗಿ ಸೆಳೆಯುವ ರೀತಿಯಲ್ಲಿ ಹೋರಾಟ ರೂಪಿಸಬೇಕು ಎಂದರು.

ಡಾ. ರಾಜಕುಮಾರ್ ಸಂಘದ ಅಧ್ಯಕ್ಷ ಬಿ.ಆರ್.ತೀರ್ಥಂಕರ್ ಕರವೇ ಅಧ್ಯಕ್ಷ ವಿ.ಎಸ್. ಬೋಜೇಗೌಡ, ವರ್ತಕರ ಸಂಘದ ಅಧ್ಯಕ್ಷ ಗಿರಿಯಪ್ಪ ಶೆಟ್ಟಿ, ಮುಖಂಡರಾದ ಬಸವರಾಜು, ಸಿದ್ದೇಗೌಡ, ಕರವೇ ಕಾರ್ಯದರ್ಶಿ ಖಾದ್ರ್ ಸಮದ್, ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ರಾಜಣ್ಣ ಇದ್ದರು.

# ಪರಿಸರಸ್ನೇಹಿ ಗಣಪತಿ ಮೂರ್ತಿ ತಯಾರಿಕೆ ಕಾರ್ಯಾಗಾರ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಗ್ರಾಮದ ಬಿಜಿಎಸ್ ಸಮುದಾಯ ಭವನದಲ್ಲಿ ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ವತಿಯಿಂದ ಶನಿವಾರ ಪರಿಸರ ಸ್ನೇಹಿ ಗಣಪತಿ ಮೂರ್ತಿ ತಯಾರಿಕೆ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರದಲ್ಲಿ ವಿವಿಧ ಶಾಲೆಗಳ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ಮಣ್ಣಿನಿಂದ ವಿವಿಧ ಭಂಗಿಯ ಆಕರ್ಷಕ ಗಣಪತಿ ಮೂರ್ತಿಗಳನ್ನು ತಯಾರಿಸಿ ತಮ್ಮ ಕೈಚಳಕ ಪ್ರದರ್ಶಿಸಿದರು. ಮಕ್ಕಳ ಸೃಜನಶೀಲತೆಯಿಂದ ಮೂಡಿಬಂದ ಗಣಪತಿ ಮೂರ್ತಿಗಳು ಗಮನ ಸೆಳೆದವು. ಕಾರ್ಯಾಗಾರದ ಮೂಲಕ ಮಕ್ಕಳಲ್ಲಿ ಪರಿಸರ ಸಂರಕ್ಷಣೆ ಹಾಗೂ ಪರಿಸರ ಸ್ನೇಹಿ ಗಣೇಶೋತ್ಸವದ ಕುರಿತು ಜಾಗೃತಿ ಮೂಡಿಸಲಾಯಿತು.

ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಮಾತನಾಡಿ, ಪಿಒಪಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣಪತಿ ಮೂರ್ತಿಗಳು ನೀರಿನಲ್ಲಿ ಸುಲಭವಾಗಿ ಕರಗದೆ ಜಲಮಾಲಿನ್ಯಕ್ಕೆ ಕಾರಣವಾಗುತ್ತವೆ. ಮಣ್ಣಿನಿಂದ ತಯಾರಿಸಿದ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಪರಿಸರ ಸ್ನೇಹಿ ಗಣಪತಿ ತಯಾರಿಸುವ ತರಬೇತಿ ನೀಡುವ ಮೂಲಕ ಪರಿಸರ ಸಂರಕ್ಷಣೆಯ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಕಲಾವಿದ ವಿಶ್ವೇಶ್ವರಯ್ಯ ಮತ್ತು ತಂಡದವರು ಮಕ್ಕಳಿಗೆ ಮಣ್ಣಿನಿಂದ ಗಣಪತಿ ಮೂರ್ತಿ ತಯಾರಿಸುವ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಬಸವರಾಜು, ತಾಲ್ಲೂಕು ನೌಕರರ ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ, ಮುಖಂಡರಾದ ಎಂ.ಟಿ. ಪಾಂಡುರಂಗ, ವಿರೂಪಾಕ್ಷ, ಮೋಹನ, ನಸ್ರುಲ್ಲಾ ಟಿಪ್ಪು ಇದ್ದರು.

# ಅರಕಲಗೂಡು: ಫುಟ್‌ಪಾತ್ ಅಂಗಡಿಗಳ ತೆರವು





• ಪ್ರಜೋದಯ ವರದಿ

**ಅರಕಲಗೂಡು:** ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದ ಫುಟ್ ಪಾತ್ ಒತ್ತುವರಿ ಹಾಗೂ ರಸ್ತೆಬದಿ ನಿರ್ಮಿಸಲಾಗಿದ್ದ ವ್ಯಾಪಾರಿ ಅಂಗಡಿಗಳನ್ನು ಪೊಲೀಸರ ಬಿಗಿ ಭದ್ರತೆಯಲ್ಲಿ ಜೆಸಿಬಿ ಮೂಲಕ ತೆರವುಗೊಳಿಸಲಾಯಿತು. ತಹಸೀಲ್ದಾರ್ ಕೆ.ಸಿ.ಸೌಮ್ಯ ಹಾಗೂ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ತೆರವು ಕಾರ್ಯಾಚರಣೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಮಾರುಕಟ್ಟೆ ಪ್ರದೇಶದಲ್ಲಿ ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ಆಕ್ರಮಿಸಿಕೊಂಡಿದ್ದ ಅಂಗಡಿಗಳನ್ನು ತೆರವುಗೊಳಿಸಿ, ಸಾರ್ವಜನಿಕರು ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಈ ವೇಳೆ ಮಾತನಾಡಿದ ಅಧಿಕಾರಿಗಳು, ಫುಟ್‌ಪಾತ್‌ನಲ್ಲಿನ ವ್ಯಾಪಾರದಿಂದಾಗಿ ತೊಂದರೆಯಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಒಂದು ವಾರ ಮೊದಲೇ ವ್ಯಾಪಾರಿಗಳಿಗೆ ತೆರವುಗೊಳಿಸುವಂತೆ ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಕಾರ್‍ಯಾಚರಣೆ ನಡೆಸಲಾಗಿದೆ ಎಂದರು.

ಫುಟ್‌ಪಾತ್ ಮತ್ತು ರಸ್ತೆಬದಿ ಒತ್ತುವರಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿಯೂ ಒತ್ತುವರಿ ಮರುಕಳಿಸದಂತೆ ನಿಗಾ ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

## ಸಂಸ್ಕೃತ ಸಪ್ತಾಹ ಸಮಾರೋಪದಲ್ಲಿ ಎಚ್.ಪಿ.ಗಂಗಾಧರಯ್ಯ ಕಿವಿಮಾತು

# ಮೌಲ್ಯಯುತ ಜೀವನಕ್ಕೆ ಸಂಸ್ಕೃತದ ಅಧ್ಯಯನ ಅತ್ಯವಶ್ಯ

• ಪ್ರಜೋದಯ ವರದಿ

**ಹಾಸನ:** ಇಂದಿನ ಯುವ ಪೀಳಿಗೆಗಳು ಮೌಲ್ಯಯುತ ಜೀವನವನ್ನು ನಡೆಸುವಂತಹವಾಗಬೇಕು ಮತ್ತು ಹಿರಿಯರನ್ನು ಗೌರವಿಸಿ ತಾವು ಸನ್ಮಾರ್ಗದಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂದು ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಪಿ.ಗಂಗಾಧರಯ್ಯ ಅವರು ತಿಳಿಸಿದರು.



ಸಂಸ್ಕೃತ ಸಂಘದಲ್ಲಿ ಸಂಸ್ಕೃತ ಪಾಠಶಾಲೆಯಿಂದ ನಡೆದ ಸಂಸ್ಕೃತ ಸಪ್ತಾಹ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕೃತ ಪಾಠಶಾಲೆಯು ಅನೇಕ ವರ್ಷಗಳಿಂದ ಮನೆ ಮನೆಯಲ್ಲಿ ಸಂಸ್ಕೃತ ಎಂಬ ಶೀರ್ಷಿಕೆ ಅಡಿಯಲ್ಲಿ ಮನೆ ಮನೆಗೆ ಹೋಗಿ ಸಂಸ್ಕೃತವನ್ನು ಸಂಸ್ಕೃತದ ಮಹತ್ವವನ್ನು ತಿಳಿಸಿ ಕೊಡುತ್ತಿರುವುದು ಅತ್ಯಂತ ಶ್ರೇಷ್ಠವಾದ ಕಾರ್ಯವಾಗಿದೆ. ಇದರಿಂದ ಜನಸಾಮಾನ್ಯರಿಗೂ ಸಂಸ್ಕೃತ ಭಾಷೆ ನಮ್ಮ ಭಾಷೆ ಎಂಬ ಅರಿವು ಮೂಡಲು ತುಂಬಾ ಸಹಕಾರಿಯಾಗುತ್ತದೆ ಇಂತಹ ಶ್ರೇಷ್ಠ ಕಾರ್ಯವನ್ನು ಸಂಸ್ಕೃತ ಪಾಠಶಾಲೆಯು ಮಾಡುತ್ತಿರುವುದು ಅತ್ಯಂತ ಸಂತೋಷದ ಸಂಗತಿ ಎಂಬ ಆಶಯವನ್ನು ವ್ಯಕ್ತಪಡಿಸಿದರು ರಾಮಾಯಣ ಗ್ರಂಥ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳು ಬಂದರು ಆಗಲು ಅತ್ಯಂತ ಸಹನೆಯಿಂದ ಸನ್ಮಾರ್ಗದಲ್ಲಿ ನಡೆದಾಗ ನಮ್ಮ ಜೀವನ ಸಾರ್ಥಕವಾಗಲು ಸಾಧ್ಯವಾಗುತ್ತದೆ ಎಂಬುದನ್ನ ತಿಳಿಸಿದರು

ನ್ಯಾಯವಾದಿ ದೇವರಾಜೇಗೌಡ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಯುವ ಪೀಳಿಗೆಯರು ಕಾನೂನಿನ ಅರಿವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು ಮತ್ತು ಕಾನೂನನ್ನು ಪಾಲನೆ ಮಾಡಬೇಕು, ಇಲ್ಲದಿದ್ದರೆ ಯುವಕರು ಮತ್ತು ಅವರ ಪೋಷಕರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಾಗಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದರು.

ಸಂಸ್ಕೃತ ಸಂಘದ ಅಧ್ಯಕ್ಷ ಎಂ.ಎಸ್.ಶ್ರೀಕಂಠಯ್ಯ ಅವರು ಮಾತನಾಡಿ, ಸಂಸ್ಕೃತ ಪಾಠಶಾಲೆ ನಿರಂತರವಾಗಿ ಅರವತ್ತು ವರ್ಷಗಳಿಂದ ನಡೆದುಕೊಂಡು ಬರ್ತಾ ಇದೆ, ಶ್ರಾವಣ ಮಾಸದ ಹುಣ್ಣಿಮೆಯನ್ನು ಸಂಸ್ಕೃತ ದಿನ ಎಂಬುದಾಗಿ ಆಚರಣೆಯನ್ನು ಮಾಡುತ್ತಾರೆ, ಸಂಸ್ಕೃತ ಹಿಂದೆ ಆಡುಭಾಷೆಯಾಗಿದ್ದು ಇಂದಿಗೂ ನಾವು ಬಳಸುತ್ತಿರುವ ಭಾಷೆಯಲ್ಲಿ ಪ್ರತಿಶತ ಎಂಬತ್ತರಷ್ಟು ಶಬ್ದಗಳು ಸಂಸ್ಕೃತದ ಶಬ್ದಗಳೇ ಆಗಿವೆ ಮತ್ತು ಸಂಸ್ಕೃತ ಪಾಠಶಾಲೆಯಲ್ಲಿ ಉಚಿತವಾಗಿ ಸಂಸ್ಕೃತವನ್ನು ಹೇಳಿಕೊಡಲಾಗುತ್ತದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತಾಗಲಿ ಎಂಬ ಆಶಯ ವ್ಯಕ್ತಪಡಿಸಿದರು

ಪಾಠಶಾಲೆ ವಿದ್ಯಾರ್ಥಿಗಳು ಪ್ರಮುಖ ಬೀದಿಯಲ್ಲಿ ಸಂಸ್ಕೃತದ ಘೋಷವಾಕ್ಯವನ್ನು ಕೂಗುತ್ತಾ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು, ನಂತರ ಪಾಠಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪಾಠಶಾಲೆಯ ಅಧ್ಯಾಪಕ ಮಂಜುನಾಥ್ ಭಟ್, ಸಂಸ್ಕೃತ ಸಂಘದ ಕಾರ್ಯದರ್ಶಿ ಪರಮೇಶ್ವರ ವಿ.ಭಟ್, ಸಹ ಶಿಕ್ಷಕ ಧನುಷ್ ಹಾಜರಿದ್ದರು.

## 7 ವರ್ಷಗಳ ಬಳಿಕ ಭಾರತಕ್ಕೆ ಆಗಮಿಸಿದ ಚೀನಾ ಅಧ್ಯಕ್ಷ



ನವದೆಹಲಿ: ಭಾರತದಲ್ಲಿ ನಡೆಯುತ್ತಿರುವ 18ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಶನಿವಾರ ಬೆಳಿಗ್ಗೆ ನವದೆಹಲಿಗೆ ಬಂದಿಳಿದರು.

ಶೃಂಗಸಭೆಯ ಸಂದರ್ಭದಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಪ್ರಧಾನಿ ಮೋದಿ ಅವರ ಆಹ್ವಾನದ ಮೇರೆಗೆ ಅವರು ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಮೋದಿ- ಕ್ಸಿ ಈ ಇಬ್ಬರು ನಾಯಕರು ಸತತ ಮೂರನೇ ವರ್ಷವೂ ಭೇಟಿಯಾಗುತ್ತಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್ ಅವರು ತಿಳಿಸಿದರು.

# ಹಾರನಹಳ್ಳಿ ಕೋಡಿಮಠದಲ್ಲಿ ಬೆಳ್ಳಿ ಪಲ್ಲಕ್ಕಿ ಉತ್ಸವ ಸಂಪನ್ನ

## ಒಂದು ತಿಂಗಳ ಶ್ರಾವಣ ವಿಶೇಷ ಕಾರ್ಯಕ್ರಮ ಯಶಸ್ವಿ

• ಪ್ರಜೋದಯ ವರದಿ

**ಹಾರನಹಳ್ಳಿ:** ಸುಕ್ಷೇತ್ರ ಶ್ರೀ ಕೋಡಿಮಠ ಮಹಾಸಂಸ್ಥಾನ ಹಾರನಹಳ್ಳಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೆಳ್ಳಿ ಪಲ್ಲಕ್ಕಿ ಉತ್ಸವ ಹಾಗೂ ಶ್ರಾವಣ ಮಾಸದ ಒಂದು ತಿಂಗಳ ವಿಶೇಷ ಕಾರ್ಯಕ್ರಮಗಳು ಶನಿವಾರ ಯಶಸ್ವಿಯಾಗಿ ಮುಗಿದವು.



ಬೆಳಿಗ್ಗೆ ಪೂಜ್ಯ ಶ್ರೀ ಶಿವಲಿಂಗ ಅಜ್ಜಯ್ಯನವರ ಭಾವಚಿತ್ರದೊಂದಿಗೆ ಬೆಳ್ಳಿ ಪಲ್ಲಕ್ಕಿ ಉತ್ಸವವು ಶ್ರೀ ಕ್ಷೇತ್ರದ ಆವರಣದಲ್ಲಿ ವಿಜೃಂಭಣೆಯಿಂದ ಜರುಗಿತು. ಪಲ್ಲಕ್ಕಿಯನ್ನು ವಿಶೇಷ ಹೂವುಗಳಿಂದ ಅಲಂಕಾರ ಮಾಡಲಾಗಿದ್ದು, ಭಕ್ತರು ಭಕ್ತಿಯಿಂದ ಪಲ್ಲಕ್ಕಿ ಹೊತ್ತು ನಮಿಸಿದರು.

ಕಾರ್ಯಕ್ರಮಕ್ಕೆ ಕೋಡಿಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿಗಳು ಹಾಗೂ ಇತರ ಗುರುಗಳು ಗಣ್ಯರು ಚಾಲನೆ ನೀಡಿದರು.

ಕೋಡಿಮಠದ ಸನ್ನಿಧಿ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ಸೊರಬದ ಜಡೆ ಸಂಸ್ಥಾನ ಮಠದ ಡಾ. ಮಹಾಂತ ಮಹಾಸ್ವಾಮಿಗಳು ಮಾತನಾಡಿ, ಕೋಡಿಮಠ ಜಗತ್ತಿಗೆ ಬೆಳಕು ನೀಡುವ ಮಠ. ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ಇಲ್ಲಿಯ ಭಕ್ತರುಗಳಿಗೆ ಅನೇಕ ಕಾರ್ಯಕ್ರಮ ಹಮ್ಮಿಕೊಂಡು ಸನ್ಮಾರ್ಗದ ಚಿಂತನೆ ಮಾಡುತ್ತಿದ್ದಾರೆ. ಇಲ್ಲಿಯ ವಾಣಿ ಜಗತ್ತಿಗೂ ಜ್ಞಾನ ನೀಡುವ ವಾಣಿಯಾಗಿದೆ ಎಂದು ಬಸವವಾದಿ ಶರಣ ಚಿಂತನೆ ಬಗ್ಗೆ ಸುದೀರ್ಘವಾಗಿ ಆಶೀರ್ವಾದ ನೀಡಿದರು.

ಸಮಾರಂಭದಲ್ಲಿ ಚನ್ನಗಿರಿಯ ಹಾಲಸ್ವಾಮಿ ವಿರಕ್ತಮಠದ ಡಾ. ಬಸವಜಯಚಂದ್ರ ಮಹಾಸ್ವಾಮಿಗಳು ಸೇರಿದಂತೆ ಅನೇಕ ಮಠಾಧೀಶರು ದಿವ್ಯ ಸಾನಿಧ್ಯ ವಹಿಸಿದ್ದರು.

ಶ್ರಾವಣ ಮಾಸದ ಒಂದು ತಿಂಗಳು ಶ್ರೀ ಮಠದಲ್ಲಿ ಲೋಕಕಲ್ಯಾಣಾರ್ಥವಾಗಿ ವಿಶೇಷ ಹೋಮಗಳು, ಭಜನೆ, ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ನಡೆದವು. ನಾಡಿನಾದ್ಯಂತ ಭಕ್ತರು ಬಂದು ಗುರುಗಳಿಗೆ ಪೂಜೆ ಸಲ್ಲಿಸಿ, ದಾಸೋಹ ಸೇವೆಗಳಲ್ಲಿ ಭಾಗವಹಿಸಿ ಅಜ್ಜಯ್ಯನ ಕೃಪೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಸೊರಬದ ಪ್ರಗತಿಪರ ರೈತ ನಾಗರಾಜ ಗೌಡರಿಗೆ ಅಭಿನಂದನಾ ಸನ್ಮಾನ ನೆರವೇರಿಸಲಾಯಿತು. ನಂತರ ದಾಸೋಹ ಸೇವೆ ನಡೆಯಿತು ಹಲವು ಗಣ್ಯರು ಹಾಗೂ ಶ್ರೀ ಮಠದ ಭಕ್ತರು ಆಗಮಿಸಿದ್ದರು.

# ಅಪೂರ್ಣ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಮೊದಲ ಆದ್ಯತೆ

• ಪ್ರಜೋದಯ ವರದಿ

**ಸಕಲೇಶಪುರ:** ಕ್ಷೇತ್ರದಲ್ಲಿ ಈಗಾಗಲೇ ಆರಂಭಗೊಂಡು ಅಪೂರ್ಣಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಯಸಳೂರು ಹೋಬಳಿಯ ದೊಡ್ಡಕಲ್ಲೂರು ಗ್ರಾಮದಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ನಿರ್ವಾಣಸ್ವಾಮಿ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿ, ಶಾಸಕರಾಗಿ ಆಯ್ಕೆಯಾದ ಬಳಿಕ ವಿವಿಧ ಯೋಜನೆಗಳಡಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತರುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ನಡೆಸಲಾಗುತ್ತಿದೆ. ಶಾಸಕರಿಗೆ ಲಭ್ಯವಾಗುವ ಅನುದಾನ ಸೀಮಿತವಾಗಿದ್ದರೂ, ಸರ್ಕಾರದ ಮಟ್ಟದಲ್ಲಿ ಅಗತ್ಯ ಅನುದಾನಕ್ಕಾಗಿ ಪ್ರಯತ್ನ ನಡೆಸಿ, ಕ್ಷೇತ್ರದಲ್ಲಿ ತುರ್ತಾಗಿ ಕೈಗೆತ್ತಿಕೊಳ್ಳಬೇಕಾದ ಹಾಗೂ ಮೊದಲು ಪೂರ್ಣಗೊಳಿಸಬೇಕಾದ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ನಿರ್ಧರಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.



ಕೇವಲ ಆಡಂಬರಕ್ಕಾಗಿ ಕಾಮಗಾರಿಗಳನ್ನು ಆರಂಭಿಸುವುದರಿಂದ ಜನರಿಗೆ ಪ್ರಯೋಜನವಿಲ್ಲ. ಈಗಾಗಲೇ ಆರಂಭಿಸಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ನೀಡುವುದು ತಮ್ಮ ನಿಲುವಾಗಿದೆ. ಇದೇ ಉದ್ದೇಶದಿಂದ ದೊಡ್ಡಕಲ್ಲೂರು ಗ್ರಾಮದ ಸಮುದಾಯ ಭವನವನ್ನು ಪೂರ್ಣಗೊಳಿಸಿ ಗ್ರಾಮಸ್ಥರಿಗೆ ಸಮರ್ಪಿಸಲಾಗಿದೆ ಎಂದು ಹೇಳಿದರು.

ಸಮುದಾಯ ಭವನ ಪೂರ್ಣಗೊಳ್ಳುವಲ್ಲಿ ಗ್ರಾಮದ ರವಿ ಹಾಗೂ ಅವರ ತಂಡ ಸೇರಿದಂತೆ ಗ್ರಾಮಸ್ಥರು ತೋರಿದ ಇಚ್ಛಾಶಕ್ತಿ ಶ್ಲಾಘನೀಯ. ಗೋಮಾಳ ಉಳಿಸಿಕೊಳ್ಳುವುದರಿಂದ ಹಿಡಿದು ಸಮುದಾಯ ಭವನದ ಕಾಮಗಾರಿ ಪೂರ್ಣಗೊಳ್ಳುವವರೆಗೂ ಗ್ರಾಮಸ್ಥರು ನಿರಂತರವಾಗಿ ಪ್ರಯತ್ನ ನಡೆಸಿದ್ದಾರೆ. ಎಲ್ಲರ ಪರಿಶ್ರಮದಿಂದ ಸುಸಜ್ಜಿತ ಸಮುದಾಯ ಭವನ ನಿರ್ಮಾಣಗೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭವನದಿಂದ ಗ್ರಾಮದ ಸಂಘ-ಸಂಸ್ಥೆಗಳ ಸಭೆ, ಧಾರ್ಮಿಕ, ಸಾಮಾಜಿಕ ಹಾಗೂ ಸಣ್ಣಪುಟ್ಟ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗಲಿದೆ. ಜನರು ಒಟ್ಟಾಗಿ ಸೇರಲು ಉತ್ತಮ ವೇದಿಕೆ ದೊರೆತಿರುವುದು ಸಂತಸದ ಸಂಗತಿಯಾಗಿದೆ ಎಂದು ತಿಳಿಸಿದರು.

ದೊಡ್ಡಕಲ್ಲೂರು ಗ್ರಾಮದ ರಸ್ತೆ ಅಭಿವೃದ್ಧಿಗೂ ಈ ಹಿಂದೆ ಬೇಡಿಕೆ ಸಲ್ಲಿಸಲಾಗಿತ್ತು. ಅದಕ್ಕೆ ಸ್ಪಂದಿಸಿ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಯಸಳೂರು ಹೋಬಳಿ ಸೇರಿದಂತೆ ಈ ಭಾಗಕ್ಕೆ ಅಗತ್ಯವಿರುವ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕ್ಷೇತ್ರದ ಜನರು ತಮ್ಮ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಹಾಗೂ ಬೆಂಬಲವನ್ನು ಉಳಿಸಿಕೊಳ್ಳುವುದು ಜವಾಬ್ದಾರಿಯಾಗಿದೆ. ಸದಾ ಕಾಲ ಜನರೊಂದಿಗೆ ಇದ್ದು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಶಾಸಕ ಸಿಮೆಂಟ್ ಮಂಜು ಹೇಳಿದರು.

ಕಾರ್ಯಕ್ರಮದಲ್ಲಿ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಗ್ರಾಮದ ಅಧ್ಯಕ್ಷ ಕಿರಣ್, ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸವಿನ್ ಗೌಡ, ಮುಖಂಡರಾದ ಪವಿತ್ರ, ರವಿತೇಜ ಉಪಸ್ಥಿತರಿದ್ದರು.

# ಮೂಲಸೌಕರ್ಯ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ

• ಪ್ರಜೋದಯ ವರದಿ



**ಸಕಲೇಶಪುರ:** ಸರ್ಕಾರಿ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಪದವಿ ಪೂರ್ವ ಕಾಲೇಜಿನಲ್ಲಿ 2004ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬಿ ಸೆಕ್ಷನ್‌ನ ಹಳೆಯ ವಿದ್ಯಾರ್ಥಿಗಳ ಸಹಯೋಗದಲ್ಲಿ ನಿರ್ಮಿಸಿರುವ ನೂತನ ನಾಮಫಲಕವನ್ನು ಉದ್ಘಾಟಿಸಿ ಅವರು ಮಾತನಾಡಿ, ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿಗಳು ಐಎಎಸ್, ಕೆಎಎಸ್, ಐಪಿಎಸ್ ಸೇರಿದಂತೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹಳೆಯ ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಉಳಿವು ಹಾಗೂ ಅಭಿವೃದ್ಧಿಗೆ ಕೈಜೋಡಿಸುವ ಜತೆಗೆ, ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಅಗತ್ಯ ನೆರವು ನೀಡಬೇಕು ಎಂದು ಅವರು ಮನವಿ ಮಾಡಿದರು.

ಶಾಸಕರಾಗಿ ಆಯ್ಕೆಯಾದ ಬಳಿಕ ಕಾಲೇಜಿನ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಶೌಚಾಲಯ, ಕಾಂಪೌಂಡ್, ಮೇಲ್ಚಾವಣಿ ಸೇರಿದಂತೆ ಹಲವು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಅಗತ್ಯವಿರುವ ಸೌಲಭ್ಯಗಳನ್ನು ಹಂತ ಹಂತವಾಗಿ ಕಲ್ಪಿಸಿ ಕಾಲೇಜನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

**ಮೊದಲು ರಾಷ್ಟ್ರೀಯತೆ ಮೈಗೂಡಿಸಿಕೊಳ್ಳಿ**

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ರಾಷ್ಟ್ರೀಯತೆಯ ಮನೋಭಾವ ಬೆಳೆಸಿಕೊಳ್ಳಬೇಕು. ದೇಶದ ಬಗ್ಗೆ ಅಭಿಮಾನ, ಸಾಮಾಜಿಕ ಜವಾಬ್ದಾರಿ ಹಾಗೂ ಸೇವಾ ಮನೋಭಾವವನ್ನು ಮೈಗೂಡಿಸಿಕೊಂಡು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಸಿಮೆಂಟ್ ಮಂಜು ಕರೆ ನೀಡಿದರು.

ವಿದ್ಯಾರ್ಥಿ ಜೀವನದಲ್ಲಿ ಕಲಿತ ಶಿಸ್ತು, ಮೌಲ್ಯಗಳು ಹಾಗೂ ಅನುಭವಗಳು ಮುಂದಿನ ಬದುಕಿಗೆ ದಾರಿದೀಪವಾಗುತ್ತವೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳು ಬಡ ಮಕ್ಕಳ ಭವಿಷ್ಯ ರೂಪಿಸುವ ಪ್ರಮುಖ ಕೇಂದ್ರಗಳಾಗಿದ್ದು, ಅವುಗಳನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, 2004ನೇ ಸಾಲಿನ ಹಳೆಯ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಕಂದಾಯ, ಖಾತೆ ಬದಲಾವಣೆ, ವಿದ್ಯುತ್ ಸಮಸ್ಯೆಗಳಿಗೆ ಸಂಬಂಧಿಸಿದ ಅರ್ಜಿಗಳು ಸಲ್ಲಿಕೆ

# ಪ್ರಜಾ ಸೇವಾ ಆಂದೋಲನ: ಜನರಿಂದ ಅಹವಾಲು ಸ್ವೀಕಾರ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕು ಆಡಳಿತ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಮನ್ವಯದೊಂದಿಗೆ ತಾಲ್ಲೂಕಿನ ಮಲ್ಲಿಪಟ್ಟಣ ಸಮುದಾಯ ಭವನದಲ್ಲಿ ಶನಿವಾರ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಲಾಯಿತು.





ಸಭೆಯನ್ನು ಉದ್ಘಾಟಿಸಿದ ಶಾಸಕ ಎ.ಮಂಜು ಮಾತನಾಡಿ, ಸಾರ್ವಜನಿಕರ ಅಹವಾಲುಗಳನ್ನು ನೇರವಾಗಿ ಸ್ವೀಕರಿಸಿ, ಸರ್ಕಾರಿ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮವನ್ನು ರೂಪಿಸಿದೆ. ಈ ಹಿಂದೆ ಜನಸಂಪರ್ಕ ಸಭೆ ಎಂಬ ಹೆಸರಿನಲ್ಲಿ ನಡೆಸಲಾಗುತ್ತಿದ್ದ ಕಾರ್ಯಕ್ರಮಕ್ಕೆ ಇದೀಗ ಪ್ರಜಾ ಸೇವಾ ಆಂದೋಲನ ಎಂದು ನಾಮಕರಣ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರಿಂದ ಕಂದಾಯ, ಖಾತೆ ಬದಲಾವಣೆ, ವಿದ್ಯುತ್ ಸಮಸ್ಯೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದ ಅರ್ಜಿಗಳು ಸಲ್ಲಿಕೆಯಾಗಿವೆ. ಸರ್ಕಾರದ ಪ್ರಜಾ ಸೇವೆ ಎಂದರೆ ಅಧಿಕಾರಿಗಳು ಜನರಿಗೆ ಉತ್ತಮ ಸೇವೆ ಒದಗಿಸುವುದಾಗಿದೆ. ಆಡಳಿತ ಮತ್ತು ಸಾರ್ವಜನಿಕರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆದ್ದರಿಂದ ಸಾರ್ವಜನಿಕರ ಕುಂದು-ಕೊರತೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ತಹಸೀಲ್ದಾರ್ ಕೆ.ಸಿ.ಸೌಮ್ಯ ಮಾತನಾಡಿ, ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಒಟ್ಟು 29 ಕುಂದುಕೊರತೆ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕಾನೂನುಬದ್ಧವಾಗಿ ಇತ್ಯರ್ಥಪಡಿಸಲು ಸಾಧ್ಯವಿರುವ ಅರ್ಜಿಗಳಿಗೆ ಶೀಘ್ರ ಪರಿಹಾರ ಒದಗಿಸಲಾಗುವುದು. ಕಾನೂನುಬದ್ಧವಾಗಿ ಇತ್ಯರ್ಥಪಡಿಸಲು ಸಾಧ್ಯವಾಗದ ಅರ್ಜಿಗಳಿಗೆ ಸೂಕ್ತ ಉತ್ತರ ಹಾಗೂ ಕಾರಣಗಳ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಅರ್ಜಿದಾರರಿಗೆ ಪತ್ರದ ಮುಖೇನ ತಲುಪಿಸಲಾಗುವುದು ಎಂದರು.

ಸಭೆಯಲ್ಲಿ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಹೆಣ್ಣು ಕೊಡಿಸುವಂತೆ ಕೋರಿ ಅರ್ಜಿ

ತಾಲ್ಲೂಕಿನ ಆಲದಹಳ್ಳಿ ಗ್ರಾಮದ 40 ವರ್ಷದ ಸಂತೋಷ್ ಎಂಬ ಯುವಕ ಹೆಣ್ಣು ಕೊಡಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದು ವಿಶೇಷವಾಗಿತ್ತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂತೋಷ್, ನಾನು ಬಿ.ಎ. ಹಾಗೂ ಎಂಬಿಎ ಪದವಿ ವ್ಯಾಸಂಗ ಪೂರ್ಣಗೊಳಿಸಿ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದೆ. ಕಳೆದ ಎರಡು ವರ್ಷಗಳ ಹಿಂದೆ ತಂದೆ-ತಾಯಿ ನಿಧನರಾದ ಬಳಿಕ ಊರಿಗೆ ಮರಳಿ ಇಲ್ಲಿಯೇ ನೆಲೆಸಿದ್ದೇನೆ.

ಸ್ವಂತ ಮನೆ, ಜಮೀನು ಹಾಗೂ ಅಂಗಡಿ ಸೇರಿದಂತೆ ಉತ್ತಮ ಜೀವನೋಪಾಯದ ಮಾರ್ಗಗಳಿದ್ದರೂ ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ. ಹಲವು ಕಡೆ ಹೆಣ್ಣು ನೋಡಿದ್ದರೂ ಯಾರೂ ಒಪ್ಪುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ಎಲ್ಲರೂ ಪಟ್ಟಣದಲ್ಲಿ ಮನೆ ಇರಬೇಕು, ಸರ್ಕಾರಿ ಉದ್ಯೋಗ ಇರಬೇಕು ಎಂಬ ಷರತ್ತು ವಿಧಿಸುತ್ತಿದ್ದಾರೆ. ಕೃಷಿ ಮಾಡಿಕೊಂಡು ಗ್ರಾಮದಲ್ಲಿಯೇ ನೆಲೆಸಿ ಜೀವನ ನಡೆಸುವ ಯುವಕರಿಗೆ ಹೆಣ್ಣು ಸಿಗದಿರುವುದು ದೊಡ್ಡ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಜಾ ಸೇವಾ ಆಂದೋಲನದಲ್ಲಿ ಹೆಣ್ಣು ಕೊಡಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದು ಸಂತೋಷ್ ತಿಳಿಸಿದರು.

## ದೆಹಲಿಯಲ್ಲಿ ವಿಶ್ವ ನಾಯಕರ ಸಮಾಗಮ

» ಮೊದಲನೇ ಪುಟದಿಂದ

ಮಾರ್ಗಸೂಚಿಯಾಗಿ ರೂಪಿಸುವ ಪ್ರಸ್ತಾವವನ್ನು ಮೋದಿ ಮುಂದಿಟ್ಟರು. ಈ ಸುಧಾರಣೆಯಲ್ಲಿ ಪ್ರಾತಿನಿಧ್ಯ, ಸ್ಪಂದನ ಶೀಲತೆ ಮತ್ತು ನಿಯಮ ರೂಪಿಸುವಿಕೆ ಎಂಬ ಮೂರು ಪ್ರಮುಖ ಅಂಶಗಳಿಗೆ ಆದ್ಯತೆ ನೀಡಬೇಕು ಎಂದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸುಧಾರಣೆಯನ್ನು ಇನ್ಮುಂದೆ ಮುಂದೂಡಲು ಸಾಧ್ಯವಿಲ್ಲ. ಹಣಕಾಸು ಸಂಸ್ಥೆಗಳಲ್ಲಿ ಮತದಾನದ ಹಕ್ಕು ಮತ್ತು ಆರ್ಥಿಕ ನೀತಿಗಳು ಇಂದಿನ ವಾಸ್ತವಿಕತೆಗೆ ಅನುಗುಣವಾಗಿರಬೇಕು. ಜಾಗತಿಕ ಆರ್ಥಿಕತೆಗೆ ವೇಗ ನೀಡುತ್ತಿರುವ ದೇಶಗಳಿಗೆ ಸೂಕ್ತ ಪಾತ್ರ ದೊರೆಯಬೇಕೆಂದರು.

**ಸಮುದ್ರ ಭದ್ರತೆಗೆ ತುರ್ತು ವ್ಯವಸ್ಥೆ**

ಜಾಗತಿಕ ವ್ಯಾಪಾರದಲ್ಲಿ ಸಮುದ್ರ ಯಾನಿಗಳ (ಸೀಫೇರರ್ಸ್) ಕೊಡುಗೆ ಮಹತ್ವದ್ದಾ ಗಿದೆ. ಆದರೆ, ಅವರಿಗೆ ಹಲವು ಸಂದರ್ಭಗಳಲ್ಲಿ ತೊಂದರೆಗಳು ಎದುರಾಗುತ್ತವೆ. ಈ ಹಿನ್ನಲೆಯಲ್ಲಿ ತುರ್ತು ಸಮುದ್ರ ಭದ್ರತಾ ವ್ಯವಸ್ಥೆ ರೂಪಿಸುವ ಬಗ್ಗೆ ಚಿಂತನೆ ನಡೆಸಬೇಕು ಎಂದು ಮೋದಿ ಸಲಹೆ ನೀಡಿದರು.

ಕೃತಕ ಬುದ್ಧಿಮತ್ತೆ (ಎಐ) ಸೇರಿ ನಿರ್ಣಾಯಕ ತಂತ್ರಜ್ಞಾನಗಳು ಭವಿಷ್ಯದ ನೀತಿ ಮತ್ತು ನಿಯಮಗಳನ್ನು ರೂಪಿಸುತ್ತಿವೆ. ಹೀಗಾಗಿ ಗ್ಲೋಬಲ್ ಸೌತ್ ದೇಶಗಳನ್ನು ಕೇವಲ ನಿಯಮ ಪಾಲಿಸುವವರಾಗಿ ಅಲ್ಲ, ನಿಯಮ ರೂಪಿಸುವವರಾಗಿ ಬೆಳೆಸುವತ್ತ ಗಮನಹರಿಸಬೇಕೆಂದರು.

# ಸರ್ಕಾರಿ ಗೌರವದೊಂದಿಗೆ ಯೋಧ ಮಧು ಅಂತ್ಯಕ್ರಿಯೆ

## ಪಟ್ಟಣದಲ್ಲಿ ಪಾರ್ಥಿವ ಶರೀರ ಮೆರವಣಿಗೆ | ಕಂಬನಿ ಮಿಡಿದ ಸಾರ್ವಜನಿಕರು

• ಪ್ರಜೋದಯ ವರದಿ

**ಆಲೂರು:** ಅನಾರೋಗ್ಯದಿಂದ ಕರ್ತವ್ಯದಲ್ಲಿದ್ದಾಗಲೇ ಮೃತಪಟ್ಟ ಗಡಿ ಭದ್ರತಾ ಪಡೆ (ಬಿಎಸ್ಎಫ್) ಯೋಧ ಹೆಚ್.ಮಧು ಅವರ ಅಂತ್ಯಕ್ರಿಯೆ ಶನಿವಾರ ಸಕಲ ಸರ್ಕಾರಿ ಗೌರವದೊಂದಿಗೆ ತಾಲ್ಲೂಕಿನ ಹಾಂಜಿಹಳ್ಳಿಯಲ್ಲಿ ನೆರವೇರಿತು.

ಮಧು ಅವರ ಪಾರ್ಥಿವ ಶರೀರ ಶನಿವಾರ ಸಂಜೆ ಮಿನಿ ವಿಧಾನಸೌಧ ಆವರಣಕ್ಕೆ ಬಂದ ಸಂದರ್ಭದಲ್ಲಿ ಶಾಸಕ ಸಿಮೆಂಟ್ ಮಂಜು, ತಹಶೀಲ್ದಾರ್ ಹೆಚ್.ಮಲ್ಲಿಕಾರ್ಜುನ್, ಪೊಲೀಸ್ ಇನ್ಸ್‌ಪೆಕ್ಟರ್ ಮೋಹನರೆಡ್ಡಿ, ಮಾಜಿ ಸೈನಿಕರು ಮತ್ತು ಹಲವು ಸಂಘ ಸಂಸ್ಥೆಗಳು, ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿ ಸ್ವಗ್ರಾಮಕ್ಕೆ ಬೀಳ್ಕೊಟ್ಟರು.

ಪಟ್ಟಣದ ಮುಖ್ಯ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿದ ಪಾರ್ಥಿವ ಶರೀರಕ್ಕೆ ರಸ್ತೆ ಇಕ್ಕೆಲ್ಲಿ ನಿಂತಿದ್ದ ಜನಸ್ತೋಮ ಅಂತಿಮ ನಮನ ಸಲ್ಲಿಸಿ ಮಧು ಅಮರ ರಹೇ ಎಂದು ಘೋಷಣೆ ಕೂಗಿದರು.

ದೇಶ ಸೇವಕನ ನಿಧನಕ್ಕೆ ಸಾರ್ವಜನಿಕರು ಕಂಬನಿ ಮಿಡಿದರು. ನಂತರ ಸ್ವಗ್ರಾಮ ಹಾಂಜಿಹಳ್ಳಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನಡೆಸಲಾಯಿತು. ಶಾಸಕ ಸಿಮೆಂಟ್ ಮಂಜು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ದೇಶ ಸೇವೆ ಮಾಡುವ ಕನಸು ಹೊತ್ತಿದ್ದ ಮಧು ಸೇನೆಗೆ ನೇಮಕಗೊಂಡು ಸುಮಾರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಇನ್ನು ಕೇವಲ ಮೂರು ತಿಂಗಳಲ್ಲಿ ನಿವೃತ್ತಿ ಹೊಂದುವ ನಿರೀಕ್ಷೆಯಲ್ಲಿದ್ದ ಮಧು ಗುರುವಾರ ಸಂಜೆ ನಿಧನ ಹೊಂದಿರುವುದು ಕುಟುಂಬಸ್ಥರಿಗೆ ತೀವ್ರ ಆಘಾತ ಉಂಟು ಮಾಡಿದೆ.



ಐದು ವರ್ಷಗಳ ಹಿಂದೆ ಮದುವೆಯಾಗಿದ್ದ ಮಧು ಅವರ ಪತ್ನಿ ಮೌನಶ್ರೀ ಅವರಿಗೆ ಒಂದೂವರೆ ತಿಂಗಳ ಗಂಡು ಮಗು ಇದೆ. ರಜೆಯ ಮೇಲೆ ಗ್ರಾಮಕ್ಕೆ ಬಂದಿದ್ದ ಮಧು, ಸೆ.8 ರಂದು ಮಂಗಳವಾರ ರಾತ್ರಿ, ಅಸ್ಸಾಂಗೆ ತೆರಳಿ ಕರ್ತವ್ಯಕ್ಕೆ ಹಾಜರಾಗಿದ್ದರು.

ಮೃತ ಯೋಧನಿಗೆ ತಂದೆ ಹನುಮಂತಯ್ಯ, ತಾಯಿ ಜಯಮ್ಮ, ಸಹೋದರ ಶಶಿ ಮತ್ತು ಓರ್ವ ಸಹೋದರಿ ಕಾವ್ಯ, ಪತ್ನಿ ಮೌನಶ್ರೀ ಮತ್ತು ಒಂದೂವರೆ ತಿಂಗಳು ಗಂಡು ಮಗು ಇದೆ.

ಯೋಧ ಮಧು ಅವರು ಬಡ ಕೃಷಿ ಕುಟುಂಬದಲ್ಲಿ ಜನಿಸಿದವರು. ಇವರ ಕುಟುಂಬ ನಾಲ್ಕು ಎಕರೆ ಕೃಷಿ ಭೂಮಿ ಹೊಂದಿದೆ. ಮೂವರು ಮಕ್ಕಳಿದ್ದರಿಂದ ಪೋಷಕರು ಕೃಷಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಿದ್ದರು. ಕುಟಂಬದ ಆರ್ಥಿಕ ಕಷ್ಟ ಅರಿತ ಮಧು ಅವರು 15 ವರ್ಷಗಳ ಹಿಂದೆ ಸೇನೆಯನ್ನು ಸೇರಿದ್ದರು. ಸೇನೆಗೆ ಸೇರಿದ ನಂತರ ಕುಂಟುಂಬದ ಸಂಪೂರ್ಣ ನಿರ್ವಹಣೆ ಅವರ ಹೆಗಲ ಮೇಲೆ ಇತ್ತು. ವೃದ್ಧ ಪೋಷಕರೊಂದಿಗೆ ಸಹೋದರ ವಾಸಿಸುತ್ತಿದ್ದಾರೆ.

# ಕರ್ವಾಲೋ ಕಾದಂಬರಿ ಕ್ವಿಜ್‌ಗೆ ಭಾರೀ ಸ್ಪಂದನೆ

• ಪ್ರಜೋದಯ ವರದಿ

**ಹಾಸನ:** ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕರ್ವಾಲೋ ಕಾದಂಬರಿ ಕುರಿತು ನಗರದ ಸ್ಕಾಲರ್ಸ್ ಅಂತರ್ರಾಷ್ಟ್ರೀಯ ಶಾಲೆಯಲ್ಲಿ ಶನಿವಾರ ಏರ್ಪಡಿಸಿದ್ದ ಕ್ವಿಜ್ ಅರ್ಥಪೂರ್ಣವಾಗಿ ನೆರವೇರಿತು.

ಅಬಚೂರಿನ ಮಿತ್ರ ವೃಂದ ಹಾಗು ಶಾಲೆಯ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ಭಾರೀ ಬೆಂಬಲ ವ್ಯಕ್ತವಾಯಿತು. ಮಿತ್ರ ವೃಂದದ ಡಾ|| ಡಿ.ಎಸ್.ಜಗದೀಶ್ ಹಾಗು ಡಾ|| ವೈ.ವಿ.ವಿನೋದ್ ಕುಮಾರ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಸ್ಕಾಲರ್ಸ್ ಅಂತರ್ರಾಷ್ಟ್ರೀಯ ಶಾಲೆಯ ಮುಖ್ಯ ಆಡಳಿತಾಧಿಕಾರಿ ಡಾ.ಚಂದ್ರಶೇಖರ್ ಇದ್ದರು.

60ಕ್ಕೂ ಹೆಚ್ಚು ತೇಜಸ್ವಿ ಅವರ ಓದುಗ ಅಭಿಮಾನಿಗಳು ನಾಡಿನ ವಿವಿಧ ಮೂಲೆಗಳಿಂದ ಬಂದಿದ್ದರು. ಗದಗ, ವಿಜಯಪುರ, ಬಾಗಲಕೋಟೆ, ದಕ್ಷಿಣ ಕನ್ನಡ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಿಂದ ಬಂದಿದ್ದ ಸಾಹಿತ್ಯ ಪ್ರೇಮಿಗಳು ಪೂರ್ಣಚಂದ್ರ ತೇಜಸ್ವಿ ಅವರ ಬರವಣಿ ಗೆಗಳ ಕುರಿತು ತಮ್ಮದೇಯಾದ ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ಪರ್ಧೆಯನ್ನು ವಯಸ್ಕರು ಮತ್ತು ಮಕ್ಕಳಿಗಾಗಿ ಎರಡು ವಿಭಾಗದಲ್ಲಿ ನಡೆಸಲಾಯಿತು.

ಸ್ಪರ್ಧೆಯ ಅಂಗವಾಗಿ ಮೊದಲಿಗೆ 30 ಅಂಕಗಳ ಪರೀಕ್ಷೆ ನಡೆಯಿತು.



ಹೆಚ್ಚು ಅಂಕ ಪಡೆದ 10 ಜನರನ್ನು ಕ್ವಿಜ್‌ಗೆ ಆಯ್ಕೆ ಮಾಡಲಾಯಿತು. ತಲಾ ಇಬ್ಬರಂತೆ 5 ತಂಡಗಳನ್ನಾಗಿಸಿ ಸ್ಪರ್ಧೆ ಏರ್ಪಟ್ಟಿತು. ನಂತರ ಗೆದ್ದ ಮೂವರಿಗೆ ಪ್ರಥಮ 10 ಸಾವಿರ ರೂ. ದ್ವಿತೀಯ 5 ಸಾವಿರ ರೂ., ತೃತೀಯ ಬಹುಮಾನ 3000 ರೂ. ಹಾಗು ಮಕ್ಕಳ ವಿಭಾಗದಲ್ಲಿ ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತೀಯ ಬಹುಮಾನ 3000 ರೂ. ಹಾಗು ತೃತೀಯ ಬಹುಮಾನ 1500 ರೂ. ನೀಡಿ ಗೌರವಿಸಲಾಯಿತು.

ಮುಕ್ತ ವಿಭಾಗದಲ್ಲಿ ಎನ್.ಆರ್. ಚಂದ್ರಶೇಖರ್-ಗಿರೀಶ್ ಕಾರ್ಗದ್ದೆ ಪ್ರಥಮ, ದ್ವಿತೀಯ ಎಂ.ಎಸ್. ಅಮೃತ, ಚಿತ್ರಾಶ್ರೀ, ತೃತೀಯ ಬಹುಮಾನ ಎಂ.ಕೆ.ನಿಸರ್ಗ ಹಾಗು ಯಶ್ವಂತ್ ಮತ್ತು ಮಕ್ಕಳ ವಿಭಾಗದಲ್ಲಿ ವೈ.ವಿ.ಪ್ರಣತಿ-ಅದ್ವಿತಾ ದೀಪಕ್, ದ್ವಿತೀಯ ಸ್ಥಾನವನ್ನು ದುಶ್ಯಂತ್, ಕರಣ್‌ಗೌಡ, ತೇಜಸ್ ಗೌಡ, ತೃತೀಯ ಬಹುಮಾನವನ್ನು ವೈ.ವಿ. ವಿಹಾನ್, ಎಂ.ಜೇಸ್ಥಾ, ಅದಿತನ್ ಪಡೆದರು.

**ತೇಜಸ್ವಿ ಒಡನಾಟ ಹಂಚಿಕೊಂಡ ಪ್ರದೀಪ್**

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಅಧ್ಯಕ್ಷ ಹಾಗು ಲೇಖಕ ಡಾ.ಪ್ರದೀಪ್ ಕೆಂಜಿಗೆ ಅವರು ತಮ್ಮ ಭಾಷಣದಲ್ಲಿ ತೇಜಸ್ವಿ ಅವರ ಒಡನಾಟದ ಕುರಿತು ಮಾಹಿತಿ ಹಂಚಿಕೊಂಡರು. ತೇಜಸ್ವಿ ಅವರ ಪರಿಚಯದ ಸಂದರ್ಭ, ಆ ಮೇಲೆ ನಡೆದ ಘಟನಾವಳಿಗಳನ್ನು ಹೇಳಿದರು. ತೇಜಸ್ವಿ ಅಭಿಮಾನಿಗಳು ಕೇಳಿದ ಸೂಕ್ಷ್ಮ ಪ್ರಶ್ನೆಗಳಿಗೆ ಉತ್ತರಿಸಿದರು.

ಕರ್ವಾಲೋ ಕಾದಂಬರಿ ಪೂರ್ಣ ಕಾಲ್ಪನಿಕವಲ್ಲ. ಪಾತ್ರಧಾರಿಗಳಾದ ಎಂಗ್ಟ, ಬಿರಿಯಾನಿ ಕರಿಯಪ್ಪ ಇದ್ದವರು. ಆದರೆ ಕರ್ವಾಲೋ ಪಾತ್ರ ಸೃಷ್ಟಿ ಕಾಲ್ಪನಿಕ ಇರಬಹುದು. ಕಥೆಯ ಕೇಂದ್ರಬಿಂದು ಕರ್ವಾಲೋ ಅವರೇ ಆಗಿದ್ದರಿಂದ ಹಾಗು ಇತರ ಪಾತ್ರಗಳು ಕಥೆಗೆ ಅವಶ್ಯವಾ ದ್ದರಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರ ಓದುಗರು ಅರಿತರೆ ಸಾಕೆಂಬುದು ತೇಜಸ್ವಿ ಅವರ ನಿಲುವಾಗಿತ್ತು ಎಂದರು.

# ವಸತಿ ಶಾಲೆ, ಶೀತಲ ಗೃಹ ನಿರ್ಮಾಣಕ್ಕೆ ಭೂಮಿಪೂಜೆ

## ಉಪ ಕಾರಾಗೃಹ ಉದ್ಘಾಟಿಸಿದ ಸಚಿವ ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಹಬ್ಬನಘಟ್ಟದಲ್ಲಿ 9 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಉಪ ಕಾರಾಗೃಹವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಶನಿವಾರ ಉದ್ಘಾಟಿಸಿದರು.

ಜೊತೆಗೆ ಗೀಜಿಹಳ್ಳಿಯ ಎ.ಪಿ.ಎಂ.ಸಿ. ಆವರಣದಲ್ಲಿ 36 ಕೋಟಿ ರೂ. ವೆಚ್ಚದ ಶ್ರಮಿಕ ವಸತಿ ಶಾಲಾ ಕಟ್ಟಡ, 10 ಕೋಟಿ ಅಂದಾಜಿನಲ್ಲಿ ಶೀತಲ ಗೃಹ ನಿರ್ಮಾಣ, ಆಯುಷ್ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಶ್ರಮಿಕರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ವಸತಿ ಶಾಲೆ ನಿರ್ಮಾಣ ಮಾಡಲಾಗುತ್ತಿದೆ. ರೈತರು ಬೆಳೆದ ಬೆಳೆಗೆ



ಬೆಲೆ ಕುಸಿತ ಕಂಡುಬಂದಾಗ ಸಂಗ್ರಹಿಸಿಡಲು ಶೀತಲ ಗೃಹ ನಿರ್ಮಿಸಲಾಗುತ್ತಿದೆ. ತಾವು ಬೆಳೆದ ತರಕಾರಿಯನ್ನು ಹಾಳಾಗದಂತೆ ಸುರಕ್ಷಿತವಾಗಿ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಟೋಕನ್ ಪಡೆದು ಕೊಂಡು ಹೋಗಬಹುದು. ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಸಾರ್ವಜನಿಕರ ಅನುಕೂಲಕ್ಕೆ ಹೊಸ ವೇಗ ನೀಡಲಾಗಿದೆ ಎಂದು ತಿಳಿಸಿದರು.



## ರಸ್ತೆ-ಚರಂಡಿ ಕಾಮಗಾರಿಗೆ ಭೂಮಿ ಪೂಜೆ

• ಪ್ರಜೋದಯ ವರದಿ

**ಹಾಸನ:** ಚಿಕ್ಕಹೊನ್ನೇನಹಳ್ಳಿ ಹಾಗು ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಕಳೆದ ಹಲವು ದಿನಗಳಿಂದ ರಸ್ತೆ ಹಾಗು ಚರಂಡಿ ಸಮಸ್ಯೆ ಕುರಿತು ಸ್ಥಳೀಯರು ಗಮನಕ್ಕೆ ತಂದು, ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು. ಸಾರ್ವಜನಿಕರ ಮನವಿಗೆ ಸ್ಪಂದಿಸಿ, ಚಿಕ್ಕಹೊನ್ನೇನಹಳ್ಳಿಯಲ್ಲಿ ರಸ್ತೆ ಹಾಗು ಚರಂಡಿ ಕಾಮಗಾರಿ ಮತ್ತು ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಎರಡೂ ಕಾಮಗಾರಿಗಳಿಗೆ 30 ಲಕ್ಷ ರೂ. ವೆಚ್ಚವಾಗಲಿದೆ ಎಂದು ತಿಳಿಸಿದರು. ಕಾಮಗಾರಿ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಶೀಘ್ರ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕೆಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

# ಮೃತ ಯೋಧನ ಪಾರ್ಥಿವ ಶರೀರಕ್ಕೆ ಅಗೌರವ: ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ಅನಾರೋಗ್ಯದಿಂದ ಮೃತಪಟ್ಟ ಯೋಧನ ಪಾರ್ಥಿವ ಶರೀರಕ್ಕೆ ಜಿಲ್ಲಾಡಳಿತ ಗೌರವ ಸಲ್ಲಿಸದೆ ಅವಮಾನ ಮಾಡಿದೆ ಎಂದು ಆರೋಪಿಸಿ ಆಲೂರು ತಾಲ್ಲೂಕಿನ ಹಾಂಜಿಹಳ್ಳಿ ಗ್ರಾಮಸ್ಥರು ಶನಿವಾರ ಜಿಲ್ಲಾಡಳಿತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆಲೂರು ತಾಲ್ಲೂಕಿನ ಹಾಂಜಿಹಳ್ಳಿಯ ಬಿಎಸ್ಎಫ್ ಯೋಧ ಹೆಚ್. ಮಧು (35) ಅನಾರೋಗ್ಯದಿಂಧ ಅಸ್ಸಾಂನಲ್ಲಿ ಗುರುವಾರ ಮೃತಪಟ್ಟಿದ್ದರು. ಶನಿವಾರ ಸಂಜೆ ಪಾರ್ಥಿವ ಶರೀರ ಹಾಸನ ತಲುಪಿತು. ಆದರೆ ಜಿಲ್ಲಾಡಳಿತದಿಂದ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿರಲಿಲ್ಲ. ಆದ್ದರಿಂದ ಕುಟುಂಬಸ್ಥರು ಹಾಗು ಸಾರ್ವಜನಿಕರು ಪಾರ್ಥಿವ ಶರೀರವನ್ನು ಜಿಲ್ಲಾಧಿಕಾರಿ ಕಚೇರಿ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ತಂದು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಸ್ಥಳಕ್ಕೆ ಆಗಮಿಸುವ ವರೆಗೆ ಪಾರ್ಥಿವ ಶರೀರ ಕೊಂಡೊಯ್ಯುವುದಿಲ್ಲವೆಂದು ಪಟ್ಟು ಹಿಡಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ



ಪ್ರತಿಭಟನಾಕಾರರ ಮನವೊಲಿಸಿದರು. ಜಿಲ್ಲಾಡಳಿತ ಪರವಾಗಿ ಮೃತ ದೇಹಕ್ಕೆ ಮಾಲಾರ್ಪಣೆ ಮಾಡಿದರು. ಇದೇ ವೇಳೆ ಪಾರ್ಥಿವ ಶರೀರ ಆಗಮನದ ಮಾಹಿತಿ ಪಡೆಯದ ಹಿನ್ನಲೆಯಲ್ಲಿ ಪೊಲೀಸರ ವಿರುದ್ಧ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಅವರು, ದೇಶ ಸೇವೆಯಲ್ಲಿ ಯೋಧರ ಪಾತ್ರ ಅತ್ಯಮೂಲ್ಯ ವಾದುದು. ಅವರಿಗೆ ಗೌರವಿಸುವುದು ಪ್ರಜ್ಞಾವಂತ ನಾಗರಿಕರ ಕರ್ತವ್ಯ. ಇಂತಹ ದು:ಖದ ಸಂದರ್ಭದಲ್ಲಿ ಅನಗತ್ಯ ಗೊಂದಲಕ್ಕೆ ಎಡೆಮಾಡಿಕೊಡು ವುದು ಬೇಡವೆಂದರು.



ಭಾರತದ ಅನುಭವಿ ಬಿಲ್ಗಾರ ಧೀರಜ್ ಬೊಮ್ಮದೇವರ ಅವರು ಭಾನುವಾರ ಮೆಕ್ಸಿಕೊದಲ್ಲಿ ಆರಂಭವಾಗಲಿರುವ ಈ ಋತುವಿನ ಅಂತ್ಯದ ಆರ್ಚರಿ ವಿಶ್ವಕಪ್ ಫೈನಲ್‌ನಲ್ಲಿ ಚೊಚ್ಚಲ ಪದಕದ ಮೇಲೆ ಕಣ್ಣಿಟ್ಟಿದ್ದಾರೆ.

# ಬರ ಎದುರಿಸಿ ಸುಭದ್ರ ಆಡಳಿತ ನೀಡಲು ಬದ್ಧ

» ಮೊದಲನೇ ಪುಟದಿಂದ

ಜನರು ಅಧಿಕಾರಿಗಳಿಗೆ ತೊಂದರೆ ನೀಡುವುದಿಲ್ಲ. ಹೀಗಾಗಿ ಅಧಿಕಾರಿಗಳು ಸಹ ಜನರಿಗೆ ಅನಗತ್ಯ ತೊಂದರೆ ನೀಡಬಾರದು. ಅವರ ಕಷ್ಟಸುಖಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕು. ಪ್ರಜಾ ಸೇವಾ ಆಂದೋಲನದಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿರುವ ಅರ್ಜಿಗಳ ವಿಲೇವಾರಿ ಕುರಿತು ಮುಂದಿನ ದಿನಗಳಲ್ಲಿ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಪರಿಶೀಲನಾ ಸಭೆ ನಡೆಸಲಾಗುವುದು. ರೈತರು ಹಾಗೂ ಸಾರ್ವಜನಿಕರ ಕೆಲಸಗಳನ್ನು ವಿಳಂಬ ಮಾಡಿ ಅನಾನುಕೂಲ ಪರಿಸ್ಥಿತಿ ಸೃಷ್ಟಿಸಬೇಡಿ ಎಂದು ಸೂಚಿಸಿದರು.

ರೈತರ ಸಂಕಷ್ಟಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕು. ರೈತರು ತಮ್ಮ ಸಮಸ್ಯೆ ಪರಿಹರಿಸುವುದನ್ನು ಹೊರತುಪಡಿಸಿ ಬೇರೆ ಏನನ್ನೂ ಕೇಳುವುದಿಲ್ಲ. ರೈತ ಸಮುದಾಯಕ್ಕಾಗಿ ಕೆಲಸ ಮಾಡುವ ಅವಕಾಶ ದೊರೆತಿರುವುದು ಪುಣ್ಯದ ಕೆಲಸ. ಹೀಗಾಗಿ ಎಲ್ಲಾ ಅಧಿಕಾರಿಗಳು ಚುರುಕಾಗಿ ಕಾರ್ಯನಿರ್ವಹಿಸಬೇಕೆಂದರು.

ಜನರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿ ಪರಿಹರಿಸುವ ಉದ್ದೇಶದಿಂದ ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಹೋಬಳಿ ಹಾಗು ತಾಲ್ಲೂಕು ಮಟ್ಟದಲ್ಲಿ ಪ್ರಜಾಸೇವಾ ಆಂದೋಲನ ಸಭೆ ನಡೆಸಲಾಗುವುದು. ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ತಪ್ಪಿಸಿ, ಅವರ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಸಮಿತಿಗಳನ್ನು ರಚಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಈ ಕಾರ್ಯ ಕೈಗೊಳ್ಳಲಾಗುವುದು. ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭಾರತ್ ಜೋಡೋ ಸಂಘಗಳನ್ನು ರಚಿಸಿ ಸದಸ್ಯರ ನೋಂದಣಿ ಮಾಡುವ ಕಾರ್ಯಕ್ಕೂ ಒತ್ತು ನೀಡಲಾಗುವುದು. ಒಂದು ಸಂಘಕ್ಕೆ ಸರ್ಕಾರದ ವತಿಯಿಂದ 10 ಲಕ್ಷ ರೂ. ವರೆಗೆ ನೆರವು ದೊರೆಯಲಿದೆ ಎಂದು ತಿಳಿಸಿದರು.

ಸಹಾಯಕ ಆಯುಕ್ತ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ಸಂತೋಷ್ ಕುಮಾರ್, ಕೈಗಾರಿಕಾ ಅಭಿವೃದ್ಧಿ ಮಂಡಳಿ ಜಂಟಿ ನಿರ್ದೇಶಕ ಮಹೇಶ್ ಕುಮಾರ್, ಕಾರ್ಮಿಕ ಅಧಿಕಾರಿ ಸುರೇಶ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಂಗಣ್ಣ, ನಗರಸಭೆ ಆಯುಕ್ತ ಕೃಷ್ಣಮೂರ್ತಿ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಉಪಸ್ಥಿತರಿದ್ದರು.

## ಸಾಲಗಾಮೆಯಲ್ಲಿ ಪ್ರಜಾ ಸೇವಾ ಆಂದೋಲನ

» ಮೊದಲನೇ ಪುಟದಿಂದ

ಪೂರೈಕೆ, ವಿದ್ಯುತ್ ಸಮಸ್ಯೆ ಹಾಗೂ ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ಸಾರ್ವಜನಿಕರು ಮನವಿ ಮಾಡಿದರು.

ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದ ಅಧಿಕಾರಿಗಳು, ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸುವ ಮೂಲಕ ಅರ್ಜಿದಾರರಿಗೆ ಅನುಕೂಲ ಕಲ್ಪಿಸಿದರು. ಬಾಕಿ ಉಳಿದಿರುವ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ತ್ವರಿತವಾಗಿ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ತಾಲ್ಲೂಕು ಆಡಳಿತದ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಯಿತು.

## ಕಾರು ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಹಾಸನ:** ಮುಂದೆ ಹೋಗುತ್ತಿದ್ದ ವಾಹನ ಓವರ್‌ಟೇಕ್ ಮಾಡಲು ಜೋರಾಗಿ ಓಡಿಸಿದ ಪರಿಣಾಮ ಕಾರು ಎದುರುಗಡೆಯಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿಯಾಗಿ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕುಪ್ಪಳಿ ಸಮೀಪ ನಡೆದಿದೆ.

ಸಂತೆಪೇಟೆಯ ನಿವಾಸಿ ರಾಜು ಮೃತರು. ಶುಕ್ರವಾರ ಸಂಜೆ 6.30ರ ಸಮಯದಲ್ಲಿ ಬೇಲೂರಿನಿಂದ ಬೈಕ್‌ನಲ್ಲಿ ಹಾಸನಕ್ಕೆ ಬರುತ್ತಿದ್ದರು. ಕುಪ್ಪಳಿ ಡಾಬಾ ಸಮೀಪ ಎದುರು ಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಸ್ಥಳದಲ್ಲೇ ಮೃತ ಪಟ್ಟಿದ್ದಾರೆ.

## ದೇವಸ್ಥಾನದಲ್ಲಿ ವ್ಯಕ್ತಿ ಮೇಲೆ ಹಲ್ಲೆ

**ಅರಸೀಕೆರೆ:** ದೇವಸ್ಥಾನದ ಹುಂಡಿ ಹಣ ಕಳವಿಗೆ ಬಂದಿದ್ದ ದುಷ್ಕರ್ಮಿ ಯೊಬ್ಬ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ನಾಗೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಸುರೇಶ್ ಗಾಯಾಳು. ಸೆ.10ರ ರಾತ್ರಿ 8.20ರ ಸಮಯದಲ್ಲಿ ಅವರು ದೇವಸ್ಥಾನದ ಕಡೆಗೆ ಬಂದಾಗ ದೇವಾಲಯದ ಗೇಟ್ ಮುರಿದು ಯಾರೋ ಒಳಗಿರುವುದು ಗೊತ್ತಾಗಿದೆ. ಸುರೇಶ್ ಅವರು ಹೋಗುತ್ತಿದ್ದಂತೆ ಅಪರಿಚಿತ ಯಾವುದೋ ಆಯುಧದಿಂದ ತಲೆಗೆ ಹೊಡೆದು ಪರಾರಿಯಾಗಿದ್ದಾನೆ. ಗಂಭೀರ ಗಾಯಗೊಂಡಿದ್ದ ಸುರೇಶ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ.

# ನಾಳೆ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ

• ಪ್ರಜೋದಯ ವರದಿ

**ಹಾಸನ:** ವಿಶ್ವ ಹಿಂದೂ ಪರಿಷತ್ ಹಾಗು ಭಜರಂಗದಳದ ವತಿಯಿಂದ ನಗರದ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸೆ.14ರಂದು ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ ಮಾಡಲಾಗುವುದೆಂದು ಹಿಂದೂ ಮಹಾಗಣಪತಿ ಪ್ರತಿಷ್ಠಾಪನಾ ಸಮಿತಿ ಕಾರ್ಯಾಧ್ಯಕ್ಷ ದಯಾನಂದ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.14ರಂದು ಮಧ್ಯಾಹ್ನ 1 ಗಂಟೆಗೆ ಗಣಪತಿ ಪ್ರತಿಷ್ಠಾಪನೆ ನೆರವೇರಿಸಲಾಗುವುದು. ಸೆ.23ರಂದು ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಶೋಭಾಯಾತ್ರೆ ನಡೆಸಿ ಗಣೇಶ ಮೂರ್ತಿಯನ್ನು ವಿಸರ್ಜಿಸಲಾಗುವುದೆಂದರು.

ಸೆ.13ರಂದು ಸಂಜೆ ಗಣಪತಿ ಮೂರ್ತಿ ನಗರಕ್ಕೆ ಆಗಮಿಸಲಿದ್ದು, ಸಮಿತಿ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಾಗುವುದು. ನಗರದ ಹೇಮಾವತಿ ಪ್ರತಿಮೆ ಬಳಿ ಈಗಾಗಲೇ ರಾಮಾಯಣದ ಸಂದೇಶ ಸಾರುವ ಬೃಹತ್ ಸ್ವಾಗತ ಕಮಾನು ನಿರ್ಮಿಸಲಾಗಿದೆ. ಗಣೇಶೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ವರಿಗೆ ವಿಶೇಷ ಪೂಜೆಯಲ್ಲಿ




ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಆಟೋ ಚಾಲಕರು, ವೈದ್ಯರು, ಕೆಎಸ್‌ಇಎಸ್‌ಸಿ ಸಿಬ್ಬಂದಿ ಸೇರಿ ವಿವಿಧ ಕ್ಷೇತ್ರಗಳ ಜನರಿಗೆ ಒಂದೊಂದು ದಿನ ವಿಶೇಷ ಪೂಜೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಗಣೇಶೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ವಿಎಚ್‌ಪಿ ಜಿಲ್ಲಾಧ್ಯಕ್ಷ ಮಹಿಪಾಲ್ ಅವರು ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಗಣೇಶೋತ್ಸವದ ಮೂಲಕ ಹಿಂದೂ ಸಮುದಾಯದಲ್ಲಿ ಧರ್ಮ ಜಾಗೃತಿ ಮೂಡುತ್ತಿದೆ. ಆದರೆ, ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಪ್ರತಿ ವರ್ಷ ಸರ್ಕಾರಗಳು ಕಠಿಣ ಕಾನೂನುಗಳನ್ನು ಜಾರಿಗೊಳಿಸುತ್ತಿದ್ದು, ಅದರಿಂದ ಉತ್ಸವ ಆಯೋಜನೆಗೆ ತೊಂದರೆಯಾಗುತ್ತಿದೆ. ಸರ್ಕಾರದ ಕೆಲವು ನಿಯಮಗಳು ಹಿಂದೂ ಸಮುದಾಯದ ಧಾರ್ಮಿಕ ಆಚರಣೆಗಳಿಗೆ ಮಾತ್ರ ಅನ್ವಯವಾಗುವ ರೀತಿಯಲ್ಲಿ ಜಾರಿಯಾಗುತ್ತಿವೆ. ಅದರಿಂದ ತಾರತಮ್ಯ ಉಂಟಾಗುತ್ತಿದೆಂಬ ಭಾವನೆ ಸಮುದಾಯದಲ್ಲಿ ಮೂಡಿದೆ ಎಂದು ಆರೋಪಿಸಿದರು.

ಹಿಂದೂ ಮಹಾಗಣಪತಿ ಉತ್ಸವ ಸಮಿತಿಯ ವಾಸು, ಸಾಯಿಪ್ರಸಾದ್, ವಿನೋದ್, ದಿನೇಶ್ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

# ಮಾಡಾಳು ಸ್ವರ್ಣಗೌರಿ ಅಮ್ಮನವರಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಮಾಡಾಳು:** ಗ್ರಾಮದ ಶ್ರೀ ಸ್ವರ್ಣಗೌರಿ ಅಮ್ಮನವರ ನೂತನ ದೇವಾಲಯದಲ್ಲಿ ಶ್ರಾವಣ ಮಾಸದ ಕೊನೆಯ ಬೆನಕನ ಅಮಾವಾಸ್ಯೆ ಅಂಗವಾಗಿ ಶುಕ್ರವಾರ ಸಂಜೆ ವಿಶೇಷ ಪೂಜಾ ಕಾರ್ಯಕ್ರಮ ಶ್ರದ್ಧಾ-ಭಕ್ತಿಯಿಂದ ನೆರವೇರಿದವು.

ಬೆಳಿಗ್ಗೆ ಕೋಡಿಮಠದ ಮಹಾತಪಸ್ವಿ ಶಿವಲಿಂಗಜ್ಜಯ್ಯ ಮೂರ್ತಿ ಹಾಗು ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿ ಸನ್ನಿಧಿಯಲ್ಲಿ ರುದ್ರಾಭಿಷೇಕ ಮತ್ತು ಕುಂಕುಮಾರ್ಚನೆ ನೆರವೇರಿಸಲಾಯಿತು. ಸಂಜೆ ಸ್ವರ್ಣಗೌರಿ ಅಮ್ಮನವರಿಗೆ ಅರ್ಚಕರಿಂದ ವಿಶೇಷ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ಬೆಳಗಿಸಲಾಯಿತು.

ಅಮಾವಾಸ್ಯೆ ಹಿನ್ನಲೆಯಲ್ಲಿ ನೂತನ ದೇವಾಲಯವನ್ನು ತಳಿರು ತೋರಣ ಹಾಗು ಬಾಳೆ ಕಂದುಗಳಿಂದ ಅಲಂಕರಿಸಲಾಗಿತ್ತು. ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ದೇವಾಲಯ ಕಂಗೊಳಿಸುತ್ತಿದ್ದು, ಭಕ್ತರ ಕಣ್ಮನ ಸೆಳೆಯಿತು.

ಕಾರ್ಯಕ್ರಮಕ್ಕೆ ಆಗಮಿಸಿದ ಭಕ್ತರಿಗೆ ಮಾಡಾಳು ಶಿವಲಿಂಗಪ್ಪ



ಮತ್ತು ಮಕ್ಕಳು ಹಾಗು ವೈ.ಸಿ. ಚಂದ್ರಶೇಖರಪ್ಪ ಕುಟುಂಬಸ್ಥರು ದಾಸೋಹ ವ್ಯವಸ್ಥೆ ಮಾಡಿದ್ದರು.

ಸುತ್ತಲಿನ ಸೀತಾಪುರ, ಕೊಪ್ಪಲು, ಯರೇಹಳ್ಳಿ, ವೈ.ಜಿ.ಹಳ್ಳಿ, ದಿಬ್ಬೂರು, ಕಣಕಟ್ಟೆ, ಪಿ.ಹೊಸಳ್ಳಿ, ಕಿತ್ತನಕೆರೆ, ದೊಣನಕಟ್ಟೆ, ಬೊಮ್ಮಸಮುದ್ರ, ಕೆ. ಶಂಕರನಹಳ್ಳಿ, ಕಡಲಮಗೆ, ಡಿ.ಎಂ. ಕುರ್ಕೆ, ಶಶಿವಾಳ, ಚಿಕ್ಕಮೇಟಿ, ಕುರ್ಕಿ, ಹಾರನಹಳ್ಳಿ, ಅಣ್ಣಾಯಕನಹಳ್ಳಿ, ಯಳವಾರೆ, ಹಿರೀಸಾದರಹಳ್ಳಿ, ಸೊಪ್ಪಿನಹಳ್ಳಿ ಸೇರಿ ವಿವಿಧ ಊರುಗಳಿಂದ ಭಕ್ತರು ಪಾಲ್ಗೊಂಡಿದ್ದರು.

# ಎತಿನಹೊಳೆ ಯೋಜನೆ ಹಳೇಬೀಡಿನ ಕೆರೆಗಳಿಗೆ ಸಂಜೀವಿನಿ

» ಮೊದಲನೇ ಪುಟದಿಂದ

ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಸೇರಿ ಬಯಲುಸೀಮೆಯ ಹಲವು ಜಿಲ್ಲೆಗಳಿಗೆ ಯೋಜನೆಯ ನೀರು ತಲುಪಿಸುವ ಉದ್ದೇಶ ಇನ್ನೂ ಸಂಪೂರ್ಣ ಸಾಕಾರಗೊಂಡಿಲ್ಲ. ಆದರೆ, ಯೋಜನೆಯ ವ್ಯಾಪ್ತಿಯಲ್ಲಿ ಇಲ್ಲದ ಹಳೇಬೀಡು ಭಾಗದ ಕೆರೆಗಳಿಗೆ ಎತ್ತಿನಹೊಳೆ ನೀರು ಹರಿಯುತ್ತಿದೆ.

ಮಲೆನಾಡು ಭಾಗದಲ್ಲಿ ತಕ್ಕಮಟ್ಟಿಗೆ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಎತ್ತಿನಹೊಳೆ ಯೋಜನೆಯ ಚೆಕ್ ಡ್ಯಾಂಗಳು ಭರ್ತಿಯಾಗುತ್ತಿವೆ. ಸಂಗ್ರಹವಾದ ನೀರನ್ನು ಅನಿವಾರ್ಯವಾಗಿ ಪಂಪ್‌ಗಳ ಮೂಲಕ ಹೇಮಾವತಿ ನದಿಗೆ ಹರಿಸಲಾಗುತ್ತಿತ್ತು. ಅದರಿಂದ ಯೋಜನೆಯ ಉದ್ದೇಶಿತ ಪ್ರದೇಶಗಳಿಗೆ ನೀರು ಸಾಗಿಸುವ ಬದಲು ಅಪಾರ ಪ್ರಮಾಣದ ನೀರು ನದಿಗೆ ಸೇರುತ್ತಿತ್ತು.

ಜಿಲ್ಲೆಯಲ್ಲಿ ತೀವ್ರ ಬರಗಾಲ ಆವರಿಸಿದ್ದು, ಹಲವು ಕೆರೆ-ಕಟ್ಟೆಗಳು ಸಂಪೂರ್ಣವಾಗಿ ಖಾಲಿಯಾಗಿದ್ದವು. ಕೃಷಿ ಚಟುವಟಿಕೆಗಳಿಗೂ ನೀರಿನ ಕೊರತೆ ಎದುರಾಗಿತ್ತು. ಜೂನ್ ಹಾಗು ಜುಲೈ ತಿಂಗಳಲ್ಲಿ ಸುರಿದ ಮಳೆಯಿಂದ ಎತ್ತಿನಹೊಳೆ ಯೋಜನೆಯ ಚೆಕ್ ಡ್ಯಾಂಗಳು ಭರ್ತಿ ಯಾದವು. ಈ ನೀರನ್ನು ಯೋಜನೆಯ ಅರ್ಧಂಬರ್ಧ ಕಾಮಗಾರಿ ಪೂರ್ಣಗೊಂಡಿರುವ ಕಾಲುವೆ ಮೂಲಕ ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಯ ಸಂಪಿಗೆಮರದ ಕೊಪ್ಪಲು ಗ್ರಾಮದವರೆಗೂ ಹರಿಸಲಾಯಿತು. ದ್ವಾರಸಮುದ್ರ ಕೆರೆ ಕೋಡಿ ಬಿದ್ದಿರುವುದರಿಂದ ಹೆಚ್ಚುವರಿ ನೀರು ಮುಂದಿನ ಜಲಮಾರ್ಗಗಳ ಮೂಲಕಹರಿದು ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರ ಸೇರುತ್ತಿದೆ.

**ದ್ವಾರಸಮುದ್ರದಲ್ಲಿ ಬೋಟಿಂಗ್**

ಹಳೇಬೀಡು ಹೊಯ್ಸಳೇಶ್ವರ ದೇವಾಲಯ ವೀಕ್ಷಿಸಲು ಪ್ರತಿದಿನ ದೇಶ-ವಿದೇಶ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಇದೀಗ ದ್ವಾರಸಮುದ್ರ ಕೆರೆ ಸಂಪೂರ್ಣ ಭರ್ತಿಯಾಗಿರುವುದು ಪ್ರವಾಸೋದ್ಯಮಕ್ಕೂ ಹೊಸ ಮೆರುಗು ನೀಡಿದೆ.

ಕೆರೆ ತುಂಬಿ ಕೋಡಿ ಬಿದ್ದಿರುವ ಹಿನ್ನಲೆ ಬೋಟಿಂಗ್ ಆರಂಭಿಸಲಾಗಿದ್ದು, ದೇವಾಲಯ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ಕೆರೆಯ ಸೌಂದರ್ಯವನ್ನು ಸವಿಯುವುದರ ಜೊತೆಗೆ ಬೋಟಿಂಗ್‌ನಲ್ಲೂ ಭಾಗವಹಿಸುತ್ತಿದ್ದಾರೆ. ಇದರಿಂದ ಪ್ರವಾಸೋದ್ಯಮಕ್ಕೆ ಮತ್ತಷ್ಟು ಆಕರ್ಷಣೆ ದೊರೆತಂತಾಗಿದೆ.

## ಸ್ವನಿಯಂತ್ರಣ, ಸಂಯಮದ ಅಭ್ಯಾಸ ಬೆಳೆಸಿಕೊಳ್ಳಿ: ಅಹಮದ್ ಹಗರೆ

# ಅನಗತ್ಯ ಕುತೂಹಲವೇ ದುಶ್ಚಟಗಳಿಗೆ ಕಾರಣ

• ಪ್ರಜೋದಯ ವರದಿ

**ಹಾಸನ:** ಅನಗತ್ಯ ಕುತೂಹಲವೇ ಕೆಲವೊಮ್ಮೆ ಯುವಜನರನ್ನು ವ್ಯಸನದ ಕತ್ತಲ ಕೂಪಕ್ಕೆ ತಳ್ಳುತ್ತದೆ. ಆದ್ದರಿಂದ ಹದಿಹರೆಯದಲ್ಲೇ ಸ್ವನಿಯಂತ್ರಣ ಹಾಗು ಸಂಯಮ ಬೆಳೆಸಿಕೊಳ್ಳುವುದು ಅಗತ್ಯ ಎಂದು ಲೇಖಕ ಅಹಮದ್ ಹಗರೆ ಅವರು ತಿಳಿಸಿದರು.

ನಗರದ ಗುಡ್ಡೇನಹಳ್ಳಿಯ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿ ನಿಲಯದಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ ವತಿಯಿಂದ ಹಮ್ಮಿಕೊಂಡಿದ್ದ ಮಾದಕ ವ್ಯಸನದ ಅಪಾಯಗಳು: ವಿದ್ಯಾರ್ಥಿ-ಯುವಜನರ ಭವಿಷ್ಯದ ಸಮಸ್ಯೆಗಳು-ಸವಾಲುಗಳು ವಿಷಯದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ತಾಂತ್ರಿಕ ಯುಗದಲ್ಲಿ ಮಾದಕ ವಸ್ತುಗಳಷ್ಟೇ ಅಪಾಯಕಾರಿಯಾಗಿ ಯುವ ಜನರನ್ನು ಆವರಿಸಿಕೊಳ್ಳುತ್ತಿರುವುದು ಅತಿಯಾದ ಮೊಬೈಲ್ ಗೀಳು. ಮೊಬೈಲ್ ನಮ್ಮ ನಿಯಂತ್ರಣದಲ್ಲಿದ್ದರೆ ಅದು ಜ್ಞಾನದ ಸಾಧನವಾಗುತ್ತದೆ. ಅದೇ ನಮ್ಮನ್ನು ನಿಯಂತ್ರಿಸಲು ಆರಂಭಿಸಿದರೆ ವ್ಯಕ್ತಿತ್ವವೇ ಕುಸಿದು, ಮನುಷ್ಯ ಜೀವಂತ ಶವವಾಗುವ ಅಪಾಯವಿದೆ ಎಂದು ಎಚ್ಚರಿಸಿದರು.

ಹದಿಹರೆಯದ ವಯಸ್ಸಿನಲ್ಲಿ ಮಾದಕ ವ್ಯಸನ ಹಾಗು ವಿವಿಧ ಗೀಳುಗಳು ಸುಲಭವಾಗಿ ಅಂಟಿಕೊಳ್ಳುವುದಕ್ಕೆ ಮೆದುಳಿನ ಬೆಳವಣಿಗೆಯೂ ಪ್ರಮುಖ ಕಾರಣವಾಗಿದೆ. ಮಾನವನ ಮೆದುಳಿನಲ್ಲಿ ಒಳಿತು-ಕೆಡುಕುಗಳನ್ನು ತೂಗಿ ನಿರ್ಧಾರ ಕೈಗೊಳ್ಳುವ ಪ್ರೀಫ್ರಂಟಲ್ ಕಾರ್ಟೆಕ್ಸ್ ಭಾಗ ಸಂಪೂರ್ಣವಾಗಿ ಪಕ್ವವಾಗಲು 25 ವರ್ಷ ಬೇಕಾಗುತ್ತದೆ. ಆದರೆ ಸಾಹಸ ಹಾಗು ಕ್ಷಣಿಕ ಸುಖವನ್ನು ಬಯಸುವ ಮನೋಭಾವ ಈ ವಯಸ್ಸಿನಲ್ಲಿ ಹೆಚ್ಚು ಚುರುಕಾಗಿರುತ್ತದೆ ಎಂದು ವಿವರಿಸಿದರು.

ಮೊಬೈಲ್ ಬಳಕೆಗೆ ನಿಗದಿತ ವೇಳಾಪಟ್ಟಿ ರೂಪಿಸಿಕೊಳ್ಳಬೇಕು. ಮೊಬೈಲ್ ಬಳಕೆ ಎಷ್ಟು ಅಗತ್ಯ, ಎಷ್ಟು ಅನಗತ್ಯ ಎಂಬುದನ್ನು ಪ್ರತಿಯೊಬ್ಬರೂ ತಮ್ಮನ್ನು ತಾವು ಪರೀಕ್ಷಿಸಿಕೊಳ್ಳಬೇಕು. ಮೊಬೈಲ್ ಹಿಡಿದು ಜಡವಾಗುವ ಕೈಗಳಲ್ಲಿ ಪುಸ್ತಕ, ಸಂಗೀತ ವಾದ್ಯ ಹಾಗು ಸೃಜನಶೀಲ ಕಲೆಗಳು ಬರಬೇಕು. ಸ್ನೇಹಿತರು ಒಟ್ಟಾಗಿ



ಕುಳಿತಾಗ ಮೊಬೈಲ್‌ನಲ್ಲಿ ಮುಳುಗುವ ಬದಲು ಪರಸ್ಪರ ಮುಖಾಮುಖಿಯಾಗಿ ಮಾತನಾಡಿ ಕಷ್ಟಸುಖ ಹಂಚಿಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ಮೊಬೈಲ್ ಜೇಬಿನಲ್ಲೇ ಇರಲಿ ಎಂದು ಹೇಳಿದರು.

ಕ್ಷಣಿಕ ಭ್ರಮೆಯ ಮಾದಕತೆ ಹಾಗು ಜೀವನದ ಮೇಲಿನ ತಾತ್ಸಾರ ಯುವಜನರನ್ನು ಆವರಿಸದಂತೆ ಮನಸ್ಸನ್ನು ಸದೃಢಗೊಳಿಸಿಕೊಳ್ಳಬೇಕು. ನಿರಂತರ ಓದು, ಬರಹ, ಆಟೋಟ, ಸಂಗೀತ, ನಾಟಕ, ಕಲೆ ಹಾಗು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಯುವ ಮನಸ್ಸುಗಳನ್ನು ಸಕಾರಾತ್ಮಕವಾಗಿರೂಪಿಸಬಹುದು. ಆರೋಗ್ಯಕರ ಹವ್ಯಾಸಗಳೇ ಮಾದಕ ವ್ಯಸನ ಸೇರಿ ಹಲವು ಅಪಾಯಕಾರಿ ಗೀಳುಗಳಿಂದ ರಕ್ಷಿಸುವ ನಿಜವಾದ ಕವಚ ಎಂ ದರು.

ಮನೋವಿಜ್ಞಾನಿ ರಘು ಪ್ರಸಾದ್, ಮಾನಸಿಕ ಒತ್ತಡದಿಂದ ಎದುರಾಗಬಹುದಾದ ಅಪಾಯಗಳ ಕುರಿತು ಮಾಹಿತಿ ನೀಡಿದರು. ಡಿವೈಎಫ್‌ಐ ಜಿಲ್ಲಾ ಸಂಚಾಲಕ ಎಂ.ಜಿ.ಪೃಥ್ವಿ, ಡಿವೈಎಫ್‌ಐ ಮುಖಂಡ ಪ್ರದೀಪ್, ಮೇಲ್ವಿಚಾರಕರು ಹಾಗು ಸಿಬ್ಬಂದಿ ಇದ್ದರು.

# ಮಹಿಳಾ ರೈತರಿಗೆ ಪುನಶ್ಚೇತನ ಕಾಫಿ ಕೃಷಿ ತರಬೇತಿ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹೆತ್ತೂರು ಹೋಬಳಿ ವಳಲಹಳ್ಳಿ ಗ್ರಾಮದಲ್ಲಿ ಮಹಿಳಾ ರೈತರಿಗಾಗಿ ಐಸಿಸಿಆರ್‌ಎಲ್ ಯೋಜನೆಯಡಿ ಪುನಶ್ಚೇತನ ಕಾಫಿ ಕೃಷಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಐಸಿಸಿಆರ್‌ಎಲ್ ಯೋಜನೆ ಸಂಯೋಜನಾಧಿಕಾರಿ ದಿವ್ಯ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹವಾಮಾನದಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತಿವೆ. ಈ ಹಿನ್ನಲೆಯಲ್ಲಿ ಕೃಷಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ಜೀವ ವೈವಿಧ್ಯವನ್ನು ಕಾಪಾಡಿ ಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಕೃಷಿ ಜೊತೆಗೆ ಉಪಕಸುಬುಗಳನ್ನು ಅಳವಡಿಸಿಕೊಂಡು ಸಮಗ್ರ ಕೃಷಿ ಪದ್ಧತಿ ಅನುಸರಿಸುವುದರಿಂದ ರೈತ ಕುಟುಂಬಗಳ ಜೀವನೋಪಾಯವನ್ನು ಮತ್ತಷ್ಟು ಬಲಪಡಿಸಬಹುದೆಂದು ತಿಳಿಸಿದರು.

ಐಸಿಸಿಆರ್‌ಎಲ್ ನಿರ್ದೇಶಕ ಅಶೋಕ್ ಕುಮಾರ್ ಅವರು ಮಾತನಾಡಿ, ಕಾಫಿ ಒಂದು ವಿಶಿಷ್ಟ ಬೆಳೆಯಾಗಿದ್ದು, ಅದರಲ್ಲಿ ಹೊಸ ಪ್ರಯೋಗಗಳನ್ನು ಕೈಗೊಳ್ಳಲು ಹಾಗು ವಿವಿಧ ರೀತಿ ಯಲ್ಲಿ ಮೌಲ್ಯವರ್ಧನೆ ಮಾಡಲು ಉತ್ತಮ ಅವಕಾಶಗಳಿವೆ. ಮಹಿಳಾ ರೈತರು ಕಾಫಿ ಉತ್ಪನ್ನ ಗಳಲ್ಲಿ ಹೆಚ್ಚಿನ ಮೌಲ್ಯವರ್ಧನೆ ಚಟುವಟಿಕೆಗಳನ್ನು ಕೈಗೊಂಡು ಆದಾಯ ಗಳಿಸುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದೆಂದು ಹೇಳಿದರು.

ಭಾಗ್ಯವತಿ ಅವರು ಮಾತನಾಡಿ, ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.



ಉತ್ತಮ ಬುದ್ಧಿಶಕ್ತಿ, ತಾಳ್ಮೆ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯದಿಂದ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆಂದರು.

ಕಾಫಿ ಮಂಡಳಿಯ ಎಸ್‌ಎಲ್‌ಒ ರಂಜಿತ್ ಅವರು ಮಾತನಾಡಿ, ಕಾಫಿ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ರೈತರು ಸಮಯಕ್ಕೆ ಸರಿಯಾಗಿ ಅಗತ್ಯ ಮಾಹಿತಿ ಪಡೆದುಕೊಂಡು ಕಾಫಿ ಮಂಡಳಿಯಿಂದ ದೊರೆಯುವ ತಾಂತ್ರಿಕ ಸಲಹೆ ಹಾಗು ವಿವಿಧ ಅನುದಾನಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಐಸಿಸಿಆರ್‌ಎಲ್ ಜಿಲ್ಲಾ ಸಂಯೋಜಕ ಶಶಿಧರ್ ಹೊಸಗದ್ದೆ ಅವರು ಮಾತನಾಡಿ, ಮುಂದಿನ ದಿನಗಳಲ್ಲಿ ಇನ್ನಷ್ಟು ರೈತರೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಯೋಜನೆಯಡಿ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. ಮಹಿಳಾ ರೈತರು ಈ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ಪುನಶ್ಚೇತನ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕೆಂದರು. ಐಸಿಸಿಆರ್‌ಎಲ್ ಕ್ಷೇತ್ರಾಧಿಕಾರಿ ವಿಶ್ವನಾಥ್ ಮತ್ತಿತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019